ಮಾನ್ಯ ಅಧ್ಯಕ್ಷರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯ ಯೋಜನಾ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:08.07.2021ರಂದು ಪೂರ್ವಾಹ್ನ 11.30 ಘಂಟೆಗೆ ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡವಳಿ

ಕ್ರಮ ಸಂಖ್ಯೆ	ಹಾಜರಿದ್ದ ಸದಸ್ಯರು	
1	ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ	ಅಧ್ಯಕ್ಷರು
2	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸದಸ್ಯರು
3	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿಎಂಐಸಿಎಪಿಎ. ಬೆಂಗಳೂರು.	ಸದಸ್ಯ ಕಾರ್ಯದರ್ಶಿಗಳು
4	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	ಸದಸ್ಯರು
	ಸದಸ್ಯರ ಪರವಾಗಿ ಹಾಜರಿದ್ದ ಅಧಿಕಾರಿಗಳು	
5	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸದಸ್ಯರು
6	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು	ಸದಸ್ಯರು
7	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	ಸದಸ್ಯರು
	ಹಾಜರಿದ್ದ ವಿಶೇಷ ಆಹ್ವಾನಿತರು	
8	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.	
9	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	
	ಗೈರು ಹಾಜರಾದ ಸದಸ್ಯರು	
11	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.	ಸದಸ್ಯರು
12	ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
13	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸದಸ್ಯರು
14	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸದಸ್ಯರು
15	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸದಸ್ಯರು
16	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸದಸ್ಯರು
17	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸದಸ್ಯರು
	ಗೈರು ಹಾಜರಾದ ವಿಶೇಷ ಆಹ್ವಾನಿತರು	
18	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ	
19	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.	
20	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	

1) ದಿನಾಂಕ:18.03.2021ರಂದು ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

*****

ದಿನಾಂಕ:18.03.2021ರಂದು ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

ತೀರ್ಮಾನ:

ದಿನಾಂಕ:18.03.2021ರಂದು ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದೃಢೀಕರಿಸಲಾಯಿತು.

2) ದಿನಾಂಕ: 18.03.2021ರಂದು ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡವಳಿಯಂತೆ ವಹಿಸಲಾದ ಕ್ರಮದ ಸಂಬಂಧ ಪಾಲನಾ ವರದಿ.

*****

ದಿನಾಂಕ: 18.03.2021ರಂದು ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡವಳಿಯಂತೆ ವಹಿಸಲಾದ ಕ್ರಮಗಳ ಕುರಿತು ಪಾಲನಾ ವರದಿಯನ್ನು ಈ ಕೆಳಕಂಡಂತೆ ಮಂಡಿಸಿದೆ.

ವಿಷಯ ಸಂಖ್ಯೆ	ವಿಷಯ	ತೆಗೆದುಕೊಂಡ ಕ್ರಮ
II	**ತಾಂತ್ರಿಕ ಶಾಖೆ**	
III	**ವಿನ್ಯಾಸ ಅನುಮೋದನೆ ಪ್ರಕರಣಗಳು**	
1	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:15/2ರ 01ಎಕರೆ, 15/3ರ 01ಎ–20ಗು, 15/4ರ 0ಎ–10ಗು ಮತ್ತು ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:103/1ರ 01ಎ–05ಗು, 103/2(ಹೊಸ ಸಂಖ್ಯೆ:103/11)ರ 01ಎ–10ಗು, 103/2(ಹೊಸ ಸಂಖ್ಯೆ:103/13)ರ 01ಎಕರೆ, 103/2(ಹೊಸ ಸಂಖ್ಯೆ:103/14)ರ 01ಎಕರೆ, 103/3ರ 01ಎಕರೆ, 103/4ರ 02ಎಕರೆ, 103/5ರ 02ಎಕರೆ, 103/6ರ 0ಎ–30ಗು, 103/7ರ 01ಎಕರೆ, 103/8ರ 02ಎಕರೆ, 103/9ರ 0ಎ–05ಗು, 105/8ರ 01ಎ–02ಗು, 105/12ರ 0ಎ–5¾ಗು, 105/15ರ 0ಎ–30ಗು ಒಟ್ಟು 17ಎ–37¾ಗು ವಿಸ್ತೀರ್ಣದ ಜಮೀನಿನಲ್ಲಿ ಮಾರ್ಪಾಡಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿ ಮೆ॥ ಎಸ್ಸೆಎಮ್ 18 ಡೆವಲಪರ್ಸ್ ಪ್ರೈ.ಲಿ., ನಿರ್ದೇಶಕರಾದ ಶ್ರೀ ಎಸ್.ಎಂ.ವೆಂಕಟೇಶ್, ಶ್ರೀ ಸಂದೀಪ್‌ಕುಮಾರ್.ವಿ, ಶ್ರೀ ವಿ.ನಾಗೇಶ್, ಶ್ರೀ ಪ್ರಕಾಶ್ ಬಾಬು.ಕೆ., ಶ್ರೀ ಎಂ.ವೆಂಕಟರಾಯುಡು @ ಎಂ.ವಿ.ರಾಯುಡು ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:4ರ 01ಎ–20ಗು, ಸರ್ವೆ ಸಂಖ್ಯೆ:6/1ರ 0ಎ–32ಗು ಮತ್ತು 6/2ರ 0ಎ–32ಗು ಒಟ್ಟು 03ಎ–04ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಶ್ರೀ ಪಿ.ಹೆಚ್.ರಾಮೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:10/2ರ 0ಎ–25ಗು, 10/3ರ 02ಎ–26ಗು, 11ರ 01ಎ–02ಗು ಮತ್ತು ಸರ್ವೆ ಸಂಖ್ಯೆ:16/2ರ 01ಎ–25ಗು ಒಟ್ಟು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

	05ಎ–38ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ವಿ.ಮೋಹನ್‌ರಾಜ್ ಮತ್ತು ಉನ್ನತಿ ಶೆಲ್ಟರ್ಸ್ ಪ್ರೈವೇಟ್ ಲಿ. ಇವರು ಸಲ್ಲಿಸಿರುವ ಮನವಿ ಕುರಿತು	
4	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಬಿ.ಆರ್.ಕುಮಾರ್ ಬಿನ್ ಲೇಟ್ ಬಿ.ಸಿ.ರಂಗೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
IV	**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು**	
1	ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಬಿ.ರಾಮಕೃಷ್ಣ ಬಿನ್ ಲೇಟ್ ಬೆಟ್ಟೇಗೌಡ.ಹೆಚ್.ಬಿ ಮತ್ತು ಶ್ರೀಮತಿ ಪಿ.ಚಂದ್ರಕಲಾ ಕೋಂ ಬಿ.ರಾಮಕೃಷ್ಣ ಇವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಸಿದ್ದಿಖ್ ಅಹಮದ್ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರಲ್ಲಿ 0ಎ–22¼ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಪಿ.ಸುಗಂಧವೇಣಿ ಕೋಂ ಲೇಟ್ ಆರ್.ಪುರುಷೋತ್ತಮನ್ ಇವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
V	**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು**	
1	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–05ಗು ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸಲು ಕೋರಿ ಶ್ರೀ ಎಂ.ಎನ್.ಪ್ರಿಯದತ್ತ ಬಿನ್ ಎಂ.ನಾರಾಯಣದಾಸ್ ಹಾಗೂ ಮಾಮಿಡಿ ಮೋಹನ್ ರೆಡ್ಡಿ ಬಿನ್ ಲೇಟ್ ವೆಂಕಟರೆಡ್ಡಿ ಇವರುಗಳು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

VI	ಇತರೆ ವಿಷಯಗಳು	
1	ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದಾವರ ಗ್ರಾಮದ ಸರ್ವೆ ಸಂಖ್ಯೆ:105/1ರಲ್ಲಿ 01ಎ–10ಗು ಮತ್ತು ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42/2ಎರಲ್ಲಿ 01ಎ–02ಗು ವಿಸ್ತೀರ್ಣದ ಜಮೀನುಗಳನ್ನು ಸೇರಿಸಿ ಅಭಿವೃದ್ಧಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಏಕ ಯೋಜನೆ ಮಂಜೂರಾತಿ ಪಡೆಯುವ ಕುರಿತು ಪ್ರಾಧಿಕಾರದ ಅಭಿಪ್ರಾಯ ಕೋರಿರುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
VII	**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು**	
1	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಗುರುಚನ್ನಬಸಪ್ಪ.ಹೆಚ್.ವಿ ಬಿನ್ ಲೇಟ್ ವೀರಭದ್ರಪ್ಪ.ಕೆ.ವಿ ರವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:70/2ರ 01ಎ–30ಗು ಮತ್ತು ಸರ್ವೆ ಸಂಖ್ಯೆ:70/3 (ಹಳೆ ಸರ್ವೆ ಸಂಖ್ಯೆ:70/1) ರಲ್ಲಿ 01ಎ–30ಗು ಒಟ್ಟು 03ಎ–20ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೆ॥ ಎಲ್.ಟಿ.ಜಿ ಇನ್‌ಫ್ರಾಸ್ಟ್ರಕ್ಚರ್ ಲಿ., ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:67/1ರ 01ಎ–08ಗು, 67/2ರ 01ಎ–32ಗು, 67/3ರ 02ಎ–16ಗು, 68/1ರ 02ಎ–07ಗು, 68/2ರ 02ಎ–06ಗು ಮತ್ತು ಸರ್ವೆ ಸಂಖ್ಯೆ:69ರ 04ಎ–24ಗು ಒಟ್ಟು 14ಎ–13ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೆ॥ ಎಲ್.ಟಿ.ಜಿ ಇನ್‌ಫ್ರಾಸ್ಟ್ರಕ್ಚರ್ ಲಿ., ರವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
4	ಪ್ರಾಧಿಕಾರದಲ್ಲಿ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
5	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/5ರ 0ಎ–07½ಗು, 8/7ರ 0ಎ–23½ಗು, 8/8ರ 0ಎ–23½ಗು, 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

	0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 10ಎ–26ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀಮತಿ ರುಕ್ಮಿಣಿ ನಾರಾಯಣ ಇವರು ಸಲ್ಲಿಸಿರುವ ಮನವಿ ಕುರಿತು.	
6	ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎಂ.ಕೆ.ಅಶೋಕ್ ಬಿನ್ ಲೇಟ್ ಎಂ.ಬಿ.ಕೆಂಪಬೋರಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
7	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 188/1ರ 03ಎ–04ಗು, 188/3ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 03ಎ–38ಗು, 290/2ರ 0ಎ–32ಗು, 291/1ರ 03ಎ–12ಗು, 291/2ರ 02ಎ–05ಗು (ಭೂಉಪಯೋಗ ಬದಲಾವಣೆಯಾಗದ 01ಗುಂಟೆ 'ಅ' ಖರಾಬು ಹೊರತುಪಡಿಸಿ) ಒಟ್ಟು 21ಎ–36ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ ಮೈಸೂರು ಉಪ ವಿಭಾಗ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
8	ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಪರಿಹಾರ ನಿಧಿಗೆ ಹಣ ಬಿಡುಗಡೆ ಮಾಡುವ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

ತೀರ್ಮಾನ:

ಪ್ರಾಧಿಕಾರದ 68ನೇ ಸಭೆಯ ನಿರ್ಣಯದಂತೆ ಕಛೇರಿಯಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

I ಆಡಳಿತ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿ ಯೋಜನಾ ಪ್ರಾಧಿಕಾರದ 2021ನೇ ಮಾರ್ಚ್ ನಿಂದ ಜೂನ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಪರಿಶೀಲನೆ ಬಗ್ಗೆ.

*****

ಪ್ರಾಧಿಕಾರದ 2021ನೇ ಮಾರ್ಚ್ ನಿಂದ ಜೂನ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು (ಅನುಬಂಧ–1)ರಲ್ಲಿ ಇರಿಸಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

ತೀರ್ಮಾನ:–

ಪ್ರಾಧಿಕಾರದ 2021ನೇ ಮಾರ್ಚ್ ನಿಂದ ಜೂನ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ವಿವರಗಳನ್ನು (ಅನುಬಂಧ–1)ರನ್ವಯ ಸಭೆಯು ಪರಿಶೀಲಿಸಿ ಅಂಗೀಕರಿಸಲಾಯಿತು.

2) **ಪ್ರಾಧಿಕಾರದಲ್ಲಿ ಲಭ್ಯವಿರುವ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಮಾಡುವ ಬಗ್ಗೆ.**

*****

ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದಲ್ಲಿ ಲಭ್ಯವಿರುವ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಮಾಡಲಾಗುತ್ತಿದ್ದು, ಹಿಂದಿನ ಸಾಲಿನಲ್ಲಿ ಇಂಡಿಯನ್ ಬ್ಯಾಂಕ್, ನ್ಯೂ ತಿಪ್ಪಸಂದ್ರ ಶಾಖೆ, ಬೆಂಗಳೂರು ನಲ್ಲಿ ರೂ. 9.00 ಕೋಟಿಗಳನ್ನು ಹೂಡಿಕೆ ಮಾಡಲಾಗಿದ್ದು, ಸದರಿ ನಿಶ್ಚಿತ ಠೇವಣಿಗಳು ಕ್ರಮವಾಗಿ ದಿನಾಂಕ: 14.04.2021, 15.04.2021, 14.05.2021, 15.05.2021 ಮತ್ತು 16.05.2021ರಂದು ಪರಿಪಕ್ವವಾಗಿದ್ದು, ಸದರಿ ಹಣವನ್ನು ಪ್ರಾಧಿಕಾರದ ಉಳಿತಾಯ ಖಾತೆಗೆ ಜಮಾ ಮಾಡಿಕೊಂಡು ನಂತರ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಮರು ಹೂಡಿಕೆಯನ್ನು ಮಾಡಬೇಕಾಗಿತ್ತು. ಆದರೆ ಕೋವಿಡ್-19ರ ಹಿನ್ನೆಲೆಯಿಂದಾಗಿ ಪ್ರಾಧಿಕಾರದಲ್ಲಿ ಸಿಬ್ಬಂದಿಯ ಕೊರತೆಯಿಂದಾಗಿ ನಿಗಧಿತ ಅವಧಿಯಲ್ಲಿ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ ಹಾಗಾಗಿ, ಸದರಿ ಠೇವಣಿಗಳು ಚಾಲ್ತಿಯಲ್ಲಿರುವ ಬಡ್ಡಿ ದರದಲ್ಲಿ (5.1%) ಅದೇ ಬ್ಯಾಂಕಿನಲ್ಲಿ ಮುಂದಿನ ಅವಧಿಗೆ ನವೀಕರಣ ಹೊಂದಿರುತ್ತದೆ.

ಆದರೆ, ಮಾರ್ಚ್-2021ರ ಅಂತ್ಯದಲ್ಲಿ ಪ್ರಾಧಿಕಾರದಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಠೇವಣಿ ಮಾಡಲು ಟೆಂಡರ್ ಕರೆಯಲಾಗಿದ್ದು, ಬಡ್ಡಿ ದರವನ್ನು ಶೇ.5% ಕ್ಕೆ ನಿಗಧಿಪಡಿಸಲಾಗಿತ್ತು. ಈ ಸಮಯದಲ್ಲಿ ಯಾವುದೇ ಬ್ಯಾಂಕ್‌ಗಳು ಸಹ ಭಾಗವಹಿಸಿರುವುದಿಲ್ಲ.

ಹಾಗಾಗಿ, ನ್ಯೂ ಇಂಡಿಯನ್ ಬ್ಯಾಂಕ್, ತಿಪ್ಪಸಂದ್ರ ಶಾಖೆ ಇಲ್ಲಿ ನವೀಕರಣವಾಗಿರುವ ಠೇವಣಿಗಳ ಮೇಲೆ ಬಡ್ಡಿಯ ದರವು ಶೇ. 5.10 ರಷ್ಟು ಇರುವುದರಿಂದ ಸದರಿ ಠೇವಣಿಗಳನ್ನು ಅದೇ ಬ್ಯಾಂಕಿನಲ್ಲಿ ಮುಂದಿನ ಅವಧಿಗೆ ಮುಂದುವರೆಸಲಾಗಿರುವ ವಿಷಯವನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಇಂಡಿಯನ್ ಬ್ಯಾಂಕ್, ನ್ಯೂ ತಿಪ್ಪಸಂದ್ರ ಶಾಖೆ, ಬೆಂಗಳೂರು ಇಲ್ಲಿ ಮುಂದಿನ ಅವಧಿಗೆ ನವೀಕರಣಗೊಂಡಿರುವ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವು ಹಾಲಿ ಚಾಲ್ತಿಯಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಬಡ್ಡಿದರಕ್ಕಿಂತ ಹೆಚ್ಚಿಗೆ ಇರುವುದನ್ನು ಸಭೆಯಲ್ಲಿ ಗಮನಿಸಲಾಯಿತು. ಹಾಗಾಗಿ, ಈಗಾಗಲೇ ಇಂಡಿಯನ್ ಬ್ಯಾಂಕ್, ನ್ಯೂ ತಿಪ್ಪಸಂದ್ರ ಶಾಖೆ, ಬೆಂಗಳೂರು ಇಲ್ಲಿ ನವೀಕರಣಗೊಂಡಿರುವ ನಿಶ್ಚಿತ ಠೇವಣಿಯನ್ನು ಮುಂದಿನ ಅವಧಿಗೆ ಮುಂದುವರೆಸಿರುವುದನ್ನು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

II ತಾಂತ್ರಿಕ ಶಾಖೆ ಪ್ರಸ್ತಾವನೆಗಳು

1) **ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯ ನೀಡಿರುವುದನ್ನು ಸ್ಥಿರೀಕರಿಸುವ ಬಗ್ಗೆ.**

*****

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮಾರ್ಚ್-2021 ರಿಂದ ಜೂನ್-2021 ಮಾಹೆಯಲ್ಲಿ ಕಟ್ಟಡ ಕಟ್ಟಲು ಒಟ್ಟು 11 ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ನೀಡಿರುವ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದ್ದು, ಸದರಿ ವಿಷಯವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ಮಾರ್ಚ್-2021 ರಿಂದ ಜೂನ್-2021*ರಲ್ಲಿ ಕಟ್ಟಡ ಪರವಾನಗೆ ಸಂಬಂಧ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.*

2) **ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೋವಿಡ್–19 ಸಾಂಕ್ರಾಮಿಕ ರೋಗದ ಸಲುವಾಗಿ ಪ್ರಾಧಿಕಾರದಿಂದ ರೂ. 2.0 ಕೋಟಿ ಹಣವನ್ನು ಪಾವತಿಸಿರುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 190 ಮೈಅಪ್ರಾ 2021 (ಇ–ಕಡತ), ದಿನಾಂಕ: 23.06.2021 ರಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಸಲುವಾಗಿ ಪ್ರಾಧಿಕಾರದಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 2.0 ಕೋಟಿ (ರೂ. ಎರಡು ಕೋಟಿ ಮಾತ್ರ) ಹಣವನ್ನು ನೀಡಲು ಅನುಮೋದನೆ ನೀಡಲಾಗಿದೆ. ಅದರಂತೆ, ಈ ಪ್ರಾಧಿಕಾರದಿಂದ ಚೆಕ್ ನಂ. 478870 ದಿನಾಂಕ: 07.07.2021ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಹುಮಹಡಿ ಕಟ್ಟಡ, ಬೆಂಗಳೂರು ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ. 2.0 ಕೋಟಿ ಹಣವನ್ನು ಪಾವತಿಸಲಾಗಿದೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಅವಗಾಹನೆಗೆ ಸಲ್ಲಿಸಲಾಗಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಕೋವಿಡ್–19 ಸಾಂಕ್ರಾಮಿಕ ರೋಗದ ಸಲುವಾಗಿ ಪ್ರಾಧಿಕಾರದಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸರ್ಕಾರದ ಆದೇಶದಂತೆ ರೂ. 2.0 ಕೋಟಿ ಹಣವನ್ನು ಈಗಾಗಲೇ ಪಾವತಿ ಮಾಡಲಾಗಿರುವ ವಿಷಯವನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

III ವಿನ್ಯಾಸ ಅನುಮೋದನೆ ಪ್ರಕರಣಗಳು

1) **ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:47/1ರ 0ಎ–20ಗು, 47/2ರ 0ಎ–09ಗು, 47/5ರ 0ಎ–18ಗು, 47/6ರ 0ಎ–16ಗು, 47/7ರ 0ಎ–17ಗು, 47/8ರ 0ಎ–15ಗು, 47/9ರ 0ಎ–09ಗು, 47/10ರ 0ಎ–20ಗು, 52/2ರ 01ಎ–03ಗು, 52/3ರ 0ಎ–28ಗು, 52/4ರ 0ಎ–29ಗು, 52/5ರ 0ಎ–37ಗು, 52/6ರ 0ಎ–07ಗು, 52/7ರ 0ಎ–23ಗು, 53/2ರ ಪೈಕಿ 0ಎ–36ಗು, 53/3ರ ಪೈಕಿ 01ಎ–14ಗು, 53/4ರ ಪೈಕಿ 01ಎ–20ಗು, 54/2ಬಿರ 0ಎ–27ಗು, 54/3ರ 01ಎ–24ಗು, 54/4ರ 04ಎ–22ಗು, 59/1ರ 02ಎ–01ಗು, 60/4ರ 0ಎ–09ಗು, 60/5ರ 0ಎ–08ಗು, 60/7ಎರ 02ಎ–11ಗು, 60/7ಬಿರ 0ಎ–09ಗು, 60/7ಸಿರ 0ಎ–35ಗು, 60/9ರ ಪೈಕಿ 0ಎ–21ಗು, 60/10ರ 01ಎ–12ಗು, 60/11ರ 0ಎ–25ಗು, 60/12ರ 0ಎ–35ಗು, 60/13ರ 0ಎ–10ಗು, 60/16ರ 0ಎ–16ಗು, 60/17ರ 0ಎ–10ಗು, 60/18ರ 0ಎ–04ಗು, 60/19ರ 0ಎ–07ಗು ಮತ್ತು 60/20ರ 0ಎ–10ಗು ಒಟ್ಟು 28ಎ–17ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಮೆ॥ ಸಮೃದ್ಧಿ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.**

*****

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:47/1ರ 0ಎ–20ಗು, 47/2ರ 0ಎ–09ಗು, 47/5ರ 0ಎ–18ಗು, 47/6ರ 0ಎ–16ಗು, 47/7ರ 0ಎ–17ಗು, 47/8ರ 0ಎ–15ಗು, 47/9ರ 0ಎ–09ಗು, 47/10ರ 0ಎ–20ಗು, 52/2ರ 01ಎ–03ಗು, 52/3ರ 0ಎ–28ಗು, 52/4ರ 0ಎ–29ಗು, 52/5ರ 0ಎ–37ಗು, 52/6ರ 0ಎ–07ಗು, 52/7ರ 0ಎ–23ಗು, 53/2ರ ಪೈಕಿ 0ಎ–36ಗು, 53/3ರ ಪೈಕಿ 01ಎ–14ಗು, 53/4ರ ಪೈಕಿ 01ಎ–20ಗು, 54/2ಬಿರ 0ಎ–27ಗು, 54/3ರ 01ಎ–24ಗು, 54/4ರ 04ಎ–22ಗು, 59/1ರ 02ಎ–01ಗು, 60/4ರ 0ಎ–09ಗು, 60/5ರ 0ಎ–08ಗು, 60/7ಎರ 02ಎ–11ಗು, 60/7ಬಿರ 0ಎ–09ಗು, 60/7ಸಿರ 0ಎ–35ಗು, 60/9ರ ಪೈಕಿ 0ಎ–21ಗು, 60/10ರ 01ಎ–12ಗು, 60/11ರ 0ಎ–25ಗು, 60/12ರ 0ಎ–35ಗು, 60/13ರ 0ಎ–10ಗು, 60/16ರ 0ಎ–16ಗು, 60/17ರ 0ಎ–10ಗು, 60/18ರ 0ಎ–04ಗು, 60/19ರ 0ಎ–07ಗು ಮತ್ತು 60/20ರ 0ಎ–10ಗು ಒಟ್ಟು 28ಎ–17ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಪಾಂಡುರಂಗಯ್ಯ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ॥ ಸಮೃದ್ಧಿ ಡೆವಲಪರ್ಸ್ ಇವರು ದಿನಾಂಕ:03.09.2018ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ, ವಿಷಯವನ್ನು

ದಿನಾಂಕ:01.02.2019ರಂದು ಜರುಗಿದ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:51ರಲ್ಲಿ ಮಂಡಿಸಲಾಗಿ, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:27.02.2019ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಅರ್ಜಿದಾರರ ದಿನಾಂಕ:14.06.2021 ಮತ್ತು 30.06.2021ರ ತಮ್ಮ ಮನವಿಯೊಂದಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಸತಿ ವಿನ್ಯಾಸದ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಲಗತ್ತಿಸಿ, ಪ್ರಸ್ತಾಪಿತ ಜಮೀನುಗಳ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಲಾಗಿದೆ.

ಪ್ರಾಧಿಕಾರದಿಂದ ದಿನಾಂಕ:01.07.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಈ ಸಂಬಂಧ ಅರ್ಜಿದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ.

ಅದರಂತೆ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಮತ್ತು ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2–ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1ರ 03ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಸಮೃದ್ಧಿ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಮೆ॥ ಸಮೃದ್ಧಿ ಡೆವಲಪರ್ಸ್ ರವರು ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1ರ 03ಎ–37ಗು ವಿಸ್ತೀರ್ಣದ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ನಅಇ/510/ಮೈಅಪ್ರಾ/2011, ಬೆಂಗಳೂರು ದಿನಾಂಕ:03.12.2011ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1, 52/2, 52/6, 52/4, 53/2, 53/4, 54/3, 54/4, 56/1, 56/2, 55/1, 55/2,3, 56/3, 67/2, 67/8, 67/9, 67/11, 67/12, 68/2ಬಿ, 69/3ಬಿ1, 141 ಗಳಲ್ಲಿನ ಒಟ್ಟು 47ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/80/ಭೂಉಬ/ದೊಡ್ಡೇರಿ/1379/2009–10, ದಿನಾಂಕ:22.12.2011ರಲ್ಲಿ ಭೂ ಉಪಯೋಗ ಬದಲಾವಣೆ ಆದೇಶ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಅರ್ಜಿ ಸಂಖ್ಯೆ:14075, ದಿನಾಂಕ:21.03.2020ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1ರಲ್ಲಿ 03ಎ–37ಗು ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರು ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(1):ಸಿ.ಆರ್/351/09–10, ದಿನಾಂಕ:15.12.2009ರಲ್ಲಿ "ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:77ರಲ್ಲಿ 72ಎಕರೆ ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 3(1)ರಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ 45ಎಕರೆ ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 1(3)ರಂತೆ ಹಾಗೂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಗ್ರಾಮದ ಸರ್ವೆ ಸಂಖ್ಯೆ:35, 37, 49, 54, 55, 56, 60, 65, 67 ಹಾಗೂ 69ರ ಜಮೀನುಗಳಿಗೆ ಈ ತಹಲ್ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರು ಪತ್ರ ಸಂಖ್ಯೆ: ಬಿಎಂಐಸಿಪಿ/ ಎಲ್ಎಕ್ಯೂ(1)/ಸಿ.ಆರ್/238/10–11, ದಿನಾಂಕ:08.10.2010ರಲ್ಲಿ "ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:77ರಲ್ಲಿ 72ಎಕರೆ ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 3(1)ರಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ 45ಎಕರೆ ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 1(3)ರಂತೆ ಹಾಗೂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಗ್ರಾಮದ ಸರ್ವೆ ಸಂಖ್ಯೆ:35, 37, 42, 52, 53, 67, 68, 141, 142, 143, 170, 175, 176, 177 ಹಾಗೂ 178ರ ಜಮೀನುಗಳಿಗೆ ಈ ತಹಲ್ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:01.07.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ–01/08/2018–19 ದಿನಾಂಕ:27.02.2019ರಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:47/1 ಮತ್ತು ಇತರೆ ಸರ್ವೆ ಸಂಖ್ಯೆಗಳಲ್ಲಿನ ಒಟ್ಟು 28ಎ–17ಗು ಜಮೀನಿಗೆ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ 10.0ಮೀ ಅಗಲದ ರಸ್ತೆಗಳಿಂದ ಸಂಪರ್ಕ ದೊರೆತಂತಾಗುತ್ತದೆ. ಪ್ರಸ್ತುತ ಸದರಿ 28ಎ–17ಗು ಜಮೀನಿಗೆ ಪ್ರಾಧಿಕಾರದಿಂದ ಅಂತಿಮ ವಿನ್ಯಾಸಕ್ಕೆ ಅನುಮೋದನೆ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಸದರಿ ಬಡಾವಣೆಯಲ್ಲಿನ ರಸ್ತೆ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಪ್ರಸ್ತುತ ಅನುಮೋದನೆ ಕೋರುತ್ತಿರುವ ಬಡಾವಣೆಗೆ ನೇರ ಸಾರ್ವಜನಿಕ ರಸ್ತೆ ಸಂಪರ್ಕ ದೊರೆಯುತ್ತದೆ.

ಅರ್ಜಿದಾರರು ಮೂಲಭೂತ ಸೌಕರ್ಯಗಳಾದ ನೀರು ಒದಗಿಸಲು ಗ್ರಾಮಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ಹಾಗೂ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯ ಭೂ ಉಪಯೋಗ ವಿಶ್ಲೇಷಣಾ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಭೂ ಉಪಯೋಗ	ನಕ್ಷೆಯ ಪ್ರಕಾರ ವಿಸ್ತೀರ್ಣ (ಚ.ಮೀ.ಗಳಲ್ಲಿ)	ನಕ್ಷೆ ಪ್ರಕಾರ ಶೇಕಡವಾರು	ವಲಯ ನಿಯಮಾವಳಿಯಂತೆ ಶೇಕಡವಾರು
1	ವಸತಿ	8549.42	53.83	ಗರಿಷ್ಠ 55.00
2	ಉದ್ಯಾನವನ ಮತ್ತು ಬಯಲುಜಾಗ	1594.33	10.04	ಕನಿಷ್ಠ 10.00
3	ನಾಗರೀಕ ಸೌಲಭ್ಯ	800.64	5.04	ಕನಿಷ್ಠ 5.00
4	ರಸ್ತೆ	4939.30	31.09	–
	ಒಟ್ಟು	**15883.69**	**100.00**	–

ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯಲ್ಲಿನ ಭೂ ಉಪಯೋಗಗಳು ವಲಯ ನಿಯಮಾವಳಿಗಳ ಮಿತಿಯಲ್ಲಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶದಂತೆ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲಾಗಿದ್ದು ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ಪ್ರಸ್ತಾಪಿತ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುವುದರಿಂದ ಮತ್ತು ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆಗಳಿಂದ ಸಂಪರ್ಕವಿರುವುದರಿಂದ ಹಾಗೂ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವುದರಿಂದ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1ರ 03ಎ-37ಗು ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2-ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು

3) **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ-15ಗು ವಿಸ್ತೀರ್ಣದ ಜಮೀನಿಗೆ ವಿನ್ಯಾಸ ಅನುಮೋದನೆ ನೀಡುವ ಸಂಬಂಧ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಶ್ರೀ ಆರ್.ಮೋಹನ್‌ದಾಸ್ ರವರ ಜಿಪಿಎದಾರರಾದ ಶ್ರೀ ಪಿ.ನಾಗರಾಜು ರವರು ದಿನಾಂಕ:24.03.2021ರಂದು ಪತ್ರ ಸಲ್ಲಿಸಿ, ಈ ಹಿಂದೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರಲ್ಲಿ 06ಎ-29ಗು ಜಮೀನಿಗೆ ನೀಡಲಾದ ವಿನ್ಯಾಸದಲ್ಲಿನ ಉಳಿಕೆ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಾಧಿಕಾರದಿಂದ ದಿನಾಂಕ:29.09.2012 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–15ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಮಂಜೂರಾತಿ ಆದೇಶ ನೀಡಿ, ಶೇ.60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿತ್ತು. ಮೆ॥ ನೈಸೆಲ್ ರವರು ದಿನಾಂಕ:27.12.2012 ರಂದು ಪತ್ರ ಸಲ್ಲಿಸಿ, ಪ್ರಸ್ತಾಪಿತ ಜಮೀನನ್ನು ಬಿಎಂಐಸಿಪಿ ಯೋಜನೆ ಸಂಬಂಧ ಕೆಐಎಡಿಬಿ ಅಧಿಸೂಚನೆ ಸಂಖ್ಯೆ: ಸಿಐ 196/ಎಸ್‌ಪಿಕ್ಯೂ98 ದಿನಾಂಕ:29.01.2003ರಂತೆ ಅಧಿಸೂಚನೆ ಹೊರಡಿಸಲಾಗಿರುವುದರಿಂದ ಪ್ರಾಧಿಕಾರದಿಂದ ನೀಡಿರುವ ವಸತಿ ವಿನ್ಯಾಸವನ್ನು ರದ್ದುಪಡಿಸಲು ಕೋರಿರುತ್ತಾರೆ. ಈ ಸಂಬಂಧ ವಿಷಯವನ್ನು ದಿನಾಂಕ:29.12.2012ರಂದು ಜರುಗಿದ ಪ್ರಾಧಿಕಾರದ 35ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:35.10ರಲ್ಲಿ ಮಂಡಿಸಲಾಗಿ, ಮೆ॥ ನೈಸ್ ಸಂಸ್ಥೆಯವರು ದಿನಾಂಕ:27.12.2012ರ ಮನವಿಯಲ್ಲಿ ಸಲ್ಲಿಸಿರುವ ಬಗ್ಗೆ ಪರಿಶೀಲಿಸಿ ಪ್ರಸ್ತಾಪಿತ ಜಮೀನು ಕೆಐಎಡಿಬಿ ಕಾಯ್ದೆ ಕಲಂ 28(1)ರಡಿಯಲ್ಲಿ ಬಿಎಂಐಸಿಪಿ ಯೋಜನೆಗೆ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿರುವುದರಿಂದ ವಿನ್ಯಾಸ ನಕ್ಷೆಗೆ ನೀಡಲಾಗಿರುವ ಅನುಮೋದನೆಯನ್ನು ಕೂಡಲೇ ರದ್ದುಪಡಿಸಲು ತೀರ್ಮಾನಿಸಲಾಗಿರುತ್ತದೆ. ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಾಧಿಕಾರದಿಂದ ದಿನಾಂಕ:01.01.2013ರಂದು ಸದರಿ ವಿನ್ಯಾಸವನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು ರವರ ಪತ್ರ ದಿನಾಂಕ:17.06.2013ರಲ್ಲಿ ಪ್ರಸ್ತಾಪಿತ ಸರ್ವೆ ಸಂಖ್ಯೆ:6ರಲ್ಲಿ 06ಎ–29ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಆದರೆ ಸರ್ವೆ ಸಂಖ್ಯೆ:6/1ರಲ್ಲಿ 05ಎ–30ಗು ಹಾಗೂ ಸರ್ವೆ ಸಂಖ್ಯೆ:6/2ರಲ್ಲಿ 06ಎ–15ಗು ಜಮೀನಿಗೆ ಒಟ್ಟು 12ಎ–05ಗು ಪೂರ ಜಮೀನಿಗೆ ಜೆ.ಎಂ.ಸಿ ತಯಾರಿಸಲಾಗಿದೆ. ಆದ್ದರಿಂದ, ಬಿಎಂಐಸಿಎಪಿಎ ರವರ ಪತ್ರದಲ್ಲಿ ಕೋರಿರುವಂತೆ ಬಿಎಂಐಸಿ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡಿರುವ ಹಾಗೂ ಭೂಸ್ವಾಧೀನಪಡಿಸಿಕೊಳ್ಳದಿರುವ ಪ್ರದೇಶವನ್ನು ಗುರುತಿಸಿ ನಕ್ಷೆಯನ್ನು ಬಿಎಂಐಸಿಎಪಿಎ ಪ್ರಾಧಿಕಾರಕ್ಕೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಅನುಷ್ಠಾನಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6ರಲ್ಲಿ ಪ್ರಸ್ತುತ ಕಲಂ 28(1)ರಂತೆ ಅಧಿಸೂಚನೆ ಹೊರಡಿಸಿರುವ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಯಾವ ಭಾಗದ ಜಮೀನು ಅಲೈನ್‌ಮೆಂಟ್ ನಂತರ ಯೋಜನೆಗೆ ಅವಶ್ಯವಿರುತ್ತದೆ ಎಂಬುದನ್ನು ತೋರಿಸಲು ತಮ್ಮ ನೈಸೆಲ್ ಕಂಪನಿಯ ಸಿಬ್ಬಂದಿಗಳನ್ನು ನಿಯೋಜಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸಸ್ ಲಿ., ರವರಿಗೆ ತಿಳಿಸಿ ಈ ಕಛೇರಿಯ ಮಾಹಿತಿಗಾಗಿ ಪತ್ರವನ್ನು ಕಳುಹಿಸಲಾಗಿತ್ತು

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ) ರವರು ಶ್ರೀ ಪಿ.ನಾಗರಾಜು ರವರಿಗೆ ದಿನಾಂಕ:07.05.2021 ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6ರಲ್ಲಿ 06ಎ–29ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸರ್ವೆ ಸಂಖ್ಯೆ:6/1ರಲ್ಲಿ 05ಎ–30ಗು ಜಮೀನಿಗೆ ಜೆ.ಎಂ.ಸಿ ನಕ್ಷೆಯನ್ನು ತಯಾರಿಸಲಾಗಿದ್ದು, ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಕುರಿತು ಪ್ರಾಧಿಕಾರದ ದಿನಾಂಕ:22.06.2021ರ ಪತ್ರದಲ್ಲಿ ಪ್ರಸ್ತಾಪಿತ ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–30ಗು ಜಮೀನು ಸದರಿ ಅಧಿಸೂಚನೆಯಲ್ಲಿ ಒಳಪಟ್ಟಿದೆಯೇ? ಅಥವಾ ಇಲ್ಲವೇ? ಎಂಬುದರ ಬಗ್ಗೆ ಪರಿಶೀಲಿಸಿ ಅರ್ಜಿದಾರರು ಕೋರುತ್ತಿರುವ ಪ್ರಸ್ತಾವನೆಯನ್ನು ಪರಿಗಣಿಸಬಹುದೇ ಎಂಬುದರ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಲು ಕೋರಲಾಗಿತ್ತು. ಅದರಂತೆ, ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ)ರವರು ದಿನಾಂಕ:30.06.2021ರ ಪತ್ರದಲ್ಲಿ ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6ರಲ್ಲಿ 06ಎ–29ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ಜೆ.ಎಂ.ಸಿ ನಕ್ಷೆಯನ್ನು ತಯಾರಿಸಲಾಗಿದ್ದು, ಆದರೆ ಅಧಿಸೂಚನೆಯಲ್ಲಿ ಸರ್ವೆ ನಂಬರ್ 6/1 ರಂದು ನಮೂದಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಹಾಗಾಗಿ, ಪ್ರಸ್ತುತ ರದ್ದುಪಡಿಸಿರುವ ವಸತಿ ವಿನ್ಯಾಸವನ್ನು ಮರುಪರಿಶೀಲಿಸಿ ನಿಯಮಾನುಸಾರ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಹಿಂದೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–15ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸಕ್ಕೆ ಮಂಜೂರಾತಿ ಆದೇಶ ನೀಡಿ, ಶೇ.60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿ, ಮೆ॥ ನೈಸೆಲ್ ಸಂಸ್ಥೆ ರವರು ಪ್ರಸ್ತಾಪಿತ ಜಮೀನು ಭೂಸ್ವಾಧೀನವಗಿರುವುದಾಗಿ ತಿಳಿಸಿರುವುದರಿಂದ ಸದರಿ ವಿಷಯವನ್ನು ದಿನಾಂಕ:29.12.2012ರಂದು ಜರುಗಿದ ಪ್ರಾಧಿಕಾರದ 35ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:35.10ರಲ್ಲಿ ಮಂಡಿಸಿ, ಸದರಿ ಸಭೆಯ ತೀರ್ಮಾನದಂತೆ ದಿನಾಂಕ:01.01.2013ರಂದು ವಿನ್ಯಾಸವನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿರುವುದನ್ನು ಸಭೆಯು ಗಮನಿಸಿತು.

ಈ ಕುರಿತು ಮಾನ್ಯ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ) ರವರು ತಮ್ಮ ದಿ: 07.05.2021 ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6ರಲ್ಲಿ 06ಎ–29ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸರ್ವೆ ಸಂಖ್ಯೆ:6/1ರಲ್ಲಿ 05ಎ–30ಗು ಜಮೀನಿಗೆ ಜೆ.ಎಂ.ಸಿ ನಕ್ಷೆಯನ್ನು ತಯಾರಿಸಲಾಗಿದ್ದು, ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ ಎಂದು ಶ್ರೀ ಪಿ.ನಾಗರಾಜು ರವರಿಗೆ ತಿಳಿಸಿರುವುದನ್ನು ಹಾಗೂ ಈ ಕುರಿತು ಪ್ರಾಧಿಕಾರದಿಂದ ಬರೆದ ಪತ್ರಕ್ಕೆ ಸಂಬಂಧಿಸಿದಂತೆ, ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ)ರವರು ದಿನಾಂಕ:30.06.2021ರ ಪತ್ರದಲ್ಲಿ ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6ರಲ್ಲಿ 06ಎ–29ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ಜೆ.ಎಂ.ಸಿ ನಕ್ಷೆಯನ್ನು ತಯಾರಿಸಲಾಗಿದ್ದು, ಆದರೆ ಅಧಿಸೂಚನೆಯಲ್ಲಿ ಸರ್ವೆ ನಂಬರ್ 6/1 ರಂದು ನಮೂದಾಗಿರುವುದಿಲ್ಲ ಎಂದು ತಿಳಿಸಿರುವ ಅಂಶವನ್ನು ಸಭೆಗೆ ವಿವರಿಸಿದರು.

ಈ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–15ಗು ವಿಸ್ತೀರ್ಣದ ಜಮೀನು ಭೂಸ್ವಾಧಿನವಾಗದಿರುವ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ) ರವರು ತಿಳಿಸಿರುವುದರಿಂದ, ಅರ್ಜಿದಾರರು ಕೋರಿರುವಂತೆ ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–15ಗು ವಿಸ್ತೀರ್ಣದ ಜಮೀನಿಗೆ ಅರ್ಜಿದಾರರಿಂದ ಎಲ್ಲಾ ಅವಶ್ಯಕ ದಾಖಲೆಗಳನ್ನು ಪಡೆದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರ 02ಎ–07ಗು ಮತ್ತು 28/3ರ 02ಎ–07ಗು ಒಟ್ಟು 04ಎ–14ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಮತ್ತು ಶ್ರೀ ಐವಾಲಗಯ್ಯ ರವರ ಜಿಪಿಎ ದಾರರದಾದ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಇದರ ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಇವರು ಕೋರಿರುವ ಬಗ್ಗೆ.**

*****

ಅರ್ಜಿದಾರರು ದಿನಾಂಕ:30.06.2021 ಮತ್ತು 02.07.2021ರಂದು ಮನವಿ ಸಲ್ಲಿಸಿ, ಪ್ರಾಧಿಕಾರದಿಂದ ನೀಡಲಾದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳಿಸಿರುವುದಾಗಿ ತಿಳಿಸಿ. ಈ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಲಗತ್ತಿಸಿ, ಪ್ರಸ್ತಾಪಿತ ಜಮೀನುಗಳ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/1ರ 02ಎ–07ಗು ಮತ್ತು 28/3ರ 02ಎ–07ಗು ಒಟ್ಟು 04ಎ–14ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಮತ್ತು ಶ್ರೀ ಐವಾಲಗಯ್ಯ ರವರ ಜಿಪಿಎ ದಾರರದಾದ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಇದರ ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಇವರು ದಿನಾಂಕ:11.06.2019ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ, ವಿಷಯವನ್ನು ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:39(4)ರಲ್ಲಿ ಮಂಡಿಸಲಾಗಿ, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ. 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:16.01.2020ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಾಧಿಕಾರದಿಂದ ದಿನಾಂಕ:01.07.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಈ ಸಂಬಂಧ ಅರ್ಜಿದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ.

ಅರ್ಜಿದಾರರು, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಮತ್ತು ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2–ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5) ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/8ರ 0ಎ–20ಗು, 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಸಲ್ಲಿಸಿರುವ ಮನವಿ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/8ರ 0ಎ–20ಗು, 31/2ರ

0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 285 ಮೈಅಪ್ರಾ 2020(ಇ) ಬೆಂಗಳೂರು, ದಿನಾಂಕ:21.01.2021ರಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–03/36/2019–20/1111, ದಿನಾಂಕ:01.02.2021ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ:216835 ರಲ್ಲಿ ಸರ್ವೆ ಸಂಖ್ಯೆ:30/8ರ 0ಎ–20ಗು, ಸಂಖ್ಯೆ:216842 ರಲ್ಲಿ ಸರ್ವೆ ಸಂಖ್ಯೆ:31/2ರ 0ಎ–15ಗು, ಸಂಖ್ಯೆ:216832 ರಲ್ಲಿ ಸರ್ವೆ ಸಂಖ್ಯೆ:31/5ರ 0ಎ–15ಗು, ಸಂಖ್ಯೆ:216833 ರಲ್ಲಿ ಸರ್ವೆ ಸಂಖ್ಯೆ:31/6ರ 02ಎ–10ಗು, ಮತ್ತು ಸಂಖ್ಯೆ:216834 ರಲ್ಲಿ ಸರ್ವೆ ಸಂಖ್ಯೆ:31/7ರ 0ಎ–30ಗು ಜಮೀನುಗಳನ್ನು ವಸತಿ (Layout) ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುತ್ತಾರೆ.

ಭೂಪರಿವರ್ತನೆಯಾದ ನಂತರ ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 30/8ರ 0ಎ–20ಗು ಜಮೀನನ್ನು ಶ್ರೀ ಮಾದೇಗೌಡ ಬಿನ್ ಲೇ॥ ಚಿಕ್ಕೇಗೌಡ, ಸರ್ವೆ ಸಂಖ್ಯೆ: 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಜಮೀನುಗಳನ್ನು ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇ॥ ಸೈಯದ್ ಅಬ್ದುಲ್ ರೆಹಮನ್ ರವರಿಂದ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ದಿನಾಂಕ: 25.06.2021ರಂದು ಪೂರ್ಣ ಜಮೀನುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಭೂಸ್ವಾ–2/ಬಿಎಂಐಸಿಪಿ/ಸಿ.ಆರ್:/128/2019–20, ದಿನಾಂಕ:27.02.2020 ಮತ್ತು ಪತ್ರ ಸಂಖ್ಯೆ: ವಿಭೂಸ್ವಾ–2/ಬಿಎಂಐಸಿಪಿ/ಸಿ.ಆರ್:/137/2019–20, ದಿನಾಂಕ:17.03.2020ಗಳಲ್ಲಿ "ಬಿಎಂಐಸಿ ಯೋಜನೆಗೆ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 30/8ರ 0ಎ–20ಗು, 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ವಲಯ ಕಛೇರಿ, ಮೈಸೂರು ಇವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ /2020–21/41, ದಿನಾಂಕ:22.05.2020 ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 31/2ರ 0ಎ–15ಗು, 31/5ರ 0ಎ–15ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 01ಎ–20ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಲಾಗಿದ್ದು, ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ /2020–21/98, ದಿನಾಂಕ:05.06.2020 ರಲ್ಲಿ " ಸರ್ವೆ ಸಂಖ್ಯೆ: 30/8ರ 0ಎ–20ಗು ಮತ್ತು ಸರ್ವೆ ಸಂಖ್ಯೆ: 31/6ರ 02ಎ–10ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾವಿಸನಿನಿ, ಶ್ರೀರಂಗಪಟ್ಟಣ ರವರ ಪತ್ರ ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2021–22/542, ದಿನಾಂಕ:30.06.2021ರಲ್ಲಿ ಸದರಿ ಜಮೀನಿಗೆ ಸ್ವಯಂ ಕಾರ್ಯ ನಿರ್ವಹಣೆ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು ನಮ್ಮ ನಿಗಮದಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ದೃಢೀಕರಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೇಳಾಪುರ ಗ್ರಾಮಪಂಚಾಯಿತಿ ರವರ ಪತ್ರ ಸಂಖ್ಯೆ:ಮೇ.ಗ್ರಾ.ಪಂ// 2020–21, ದಿನಾಂಕ:26.06.2021ರಲ್ಲಿ ಸದರಿ ಜಮೀನುಗಳಲ್ಲಿ ಅರ್ಜಿದಾರರು ಬಡಾವಣೆಯನ್ನು ಅಭಿವೃದ್ಧಿಪಡಿಸಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ಹಾಗೂ ಸದರಿ ಜಮೀನುಗಳಿಗೆ ಅರ್ಜಿದಾರರಿಂದ ನಿಯಮಾನುಸಾರ ಶುಲ್ಕವನ್ನು ಪಾವತಿಸಿಕೊಂಡು ಎಲ್ಲಾ ಮೂಲಭೂತ ಸೌಕರ್ಯ ಕಲ್ಪಿಸಿಕೊಡಲಾಗುವುದು ಎಂದು ದೃಢೀಕರಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈರ್ಮಲ್ಯ ಉಪ ವಿಭಾಗ, ಶ್ರೀರಂಗಪಟ್ಟಣ ರವರು ಪತ್ರ ಸಂಖ್ಯೆ: ಸ.ಕಾ.ಅ/ಗ್ರಾ.ಕು.ನೀ&ನೈ/ಉಪ ವಿಭಾಗ/ಶ್ರೀ.ರ.ಪ್ರ/2021–22/61, ದಿನಾಂಕ:02.07.2021 ರಲ್ಲಿ ಸದರಿ ಬಡಾವಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಬಂಧಿಸಿದಂತೆ ನಮಗೆ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶದಂತೆ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲಾಗಿದ್ದು ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ಪ್ರಸ್ತಾಪಿತ ಜಮೀನುಗಳನ್ನು ವಸತಿ (Layout) ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುವುದರಿಂದ ಅರ್ಜಿದಾರರು ಸಲ್ಲಿಸಿರುವ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಶ್ರೀರಂಗಪಟ್ಟಣ ತಾಲ್ಲೂಕು, ರವರು ದೃಢೀಕರಿಸಿರುವ ಜಂಟಿ ಸರ್ವೆ ನಕ್ಷೆಯನ್ವಯ ವಸತಿ ವಿನ್ಯಾಸ ನಕ್ಷೆಯನ್ನು ವಲಯ ನಿಯಮಾವಳಿಗಳನ್ವಯ ಪರಿಶೀಲಿಸಿಕೊಂಡು ಮತ್ತು ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿಕೊಂಡು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/8ರ 0ಎ–20ಗು, 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ) ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಇದ್ದಲ್ಲಿ ವಲಯ ನಿಯಮಾವಳಿಗಳ ಮಿತಿಯಲ್ಲಿ ಪರಿಶೀಲಿಸಿಕೊಂಡು ಅನುಮೋದಿಸಲು ಸದಸ್ಯ–ಕಾರ್ಯದರ್ಶಿ ರವರಿಗೆ ಅಧಿಕಾರ ನೀಡಲಾಯಿತು.

6) **ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 01ಎ–00ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–00ಗು ಒಟ್ಟು 06ಎಕರೆ–02ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಸಲ್ಲಿಸಿರುವ ಮನವಿ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 01ಎ–00ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–00ಗು ಒಟ್ಟು 06ಎಕರೆ–02ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 287 ಮೈಅಪ್ರಾ 2020(ಇ) ಬೆಂಗಳೂರು, ದಿನಾಂಕ:21.01.2021ರಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–03/35/2019–20/1112, ದಿನಾಂಕ:01.02.2021ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ:216823 ರಲ್ಲಿ ಸರ್ವೆ ಸಂಖ್ಯೆ: 56/2ರ 01ಎ–0ಗು, ಸಂಖ್ಯೆ:216824 ರಲ್ಲಿ ಸರ್ವೆ ಸಂಖ್ಯೆ: 57/6ರ 01ಎ–10ಗು, ಸಂಖ್ಯೆ:216822 ರಲ್ಲಿ ಸರ್ವೆ ಸಂಖ್ಯೆ: 57/7ರ 02ಎ–32ಗು, ಸಂಖ್ಯೆ:216825 ರಲ್ಲಿ ಸರ್ವೆ ಸಂಖ್ಯೆ: 57/16ರ 01ಎ–0ಗು ಜಮೀನುಗಳನ್ನು ವಸತಿ (Layout) ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುತ್ತಾರೆ.

ಭೂಪರಿವರ್ತನೆಯಾದ ನಂತರ ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 01ಎ–00ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–00ಗು ಒಟ್ಟು 06ಎಕರೆ–02ಗುಂಟೆ ಪೂರ್ಣ ಜಮೀನುಗಳನ್ನು ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇ॥ ಸೈಯದ್ ಅಬ್ದುಲ್ ರೆಹಮನ್ ರವರಿಂದ ಮೆ॥ ಅಹದ್ ಬಿಲ್ಡರ್ಸ್ ಪೈ.ಲಿ., ರವರು ದಿನಾಂಕ: 25.06.2021ರಂದು ಕ್ರಯಕ್ಕೆ ಪಡೆದಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಭೂಸ್ವಾ–2/ಬಿಎಂಐಸಿಪಿ/ಸಿ.ಆರ್:/138/2019–20, ದಿನಾಂಕ:17.03.2020ರಲ್ಲಿ "ಬಿಎಂಐಸಿ ಯೋಜನೆಗೆ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 1ಎ–0ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–0ಗು ಒಟ್ಟು 06ಎಕರೆ–02ಗುಂಟೆ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ವಲಯ ಕಛೇರಿ, ಮೈಸೂರು ಇವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ /2020–21/43, ದಿನಾಂಕ:22.05.2020 ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 1ಎ–0ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–0ಗು ಒಟ್ಟು 06ಎಕರೆ–02ಗುಂಟೆ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾವಿಸನಿನಿ, ಶ್ರೀರಂಗಪಟ್ಟಣ ರವರ ಪತ್ರ ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2021–22/541, ದಿನಾಂಕ:30.06.2021ರಲ್ಲಿ ಸದರಿ ಜಮೀನಿಗೆ ಸ್ವಯಂ ಕಾರ್ಯ ನಿರ್ವಹಣೆ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು ನಮ್ಮ ನಿಗಮದಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ದೃಢೀಕರಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೇಳಾಪುರ ಗ್ರಾಮಪಂಚಾಯಿತಿ ರವರ ಪತ್ರ ಸಂಖ್ಯೆ:ಮೇ.ಗ್ರಾ.ಪಂ// 2020 21, ದಿನಾಂಕ:26.06.2021ರಲ್ಲಿ ಸದರಿ ಜಮೀನುಗಳಲ್ಲಿ ಅರ್ಜಿದಾರರು ಬಡಾವಣೆಯನ್ನು ಅಭಿವೃದ್ಧಿಪಡಿಸಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ಹಾಗೂ ಸದರಿ ಜಮೀನುಗಳಿಗೆ ಅರ್ಜಿದಾರರಿಂದ ನಿಯಮಾನುಸಾರ ಶುಲ್ಕವನ್ನು ಪಾವತಿಸಿಕೊಂಡು ಎಲ್ಲಾ ಮೂಲಭೂತ ಸೌಕರ್ಯ ಕಲ್ಪಿಸಿಕೊಡಲಾಗುವುದು ಎಂದು ದೃಢೀಕರಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈರ್ಮಲ್ಯ ಉಪ ವಿಭಾಗ, ಶ್ರೀರಂಗಪಟ್ಟಣ ರವರು ಪತ್ರ ಸಂಖ್ಯೆ: ಸ.ಕಾ.ಅ/ಗ್ರಾ.ಕು.ನೀ&ನೈ/ಉಪ ವಿಭಾಗ/ಶ್ರೀ.ರ.ಪ್ರ/2021–22/60, ದಿನಾಂಕ:02.07.2021 ರಲ್ಲಿ ಸದರಿ

ಬಡಾವಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಬಂಧಿಸಿದಂತೆ ನಮಗೆ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಕೃಷಿ ಉತ್ಪನ್ನಗಳ ಉಗ್ರಾಣ/ ವೇರ್ ಹೌಸ್ ಮತ್ತು ಶೀತಲೀಕರಣ ಕೇಂದ್ರ, ಕಲ್ಯಾಣ ಮಂಟಪ, ಆರೋಗ್ಯ ಕೇಂದ್ರ/ಮೆಡಿಕಲ್ ಕ್ಲಿನಿಕ್, ಶೈಕ್ಷಣಿಕ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಡಾ॥ ಹೆಚ್.ಎಂ.ವೆಂಕಟಪ್ಪ ಬಿನ್ ಲೇಟ್ ಮಂಚೇಗೌಡ, ಕಣ್ವ ಫೌಂಡೇಶನ್ ರವರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್‌ಎಕ್ಯೂ(2)/ಸಿಆರ್/18/2021–22, ದಿನಾಂಕ:07.07.2021ರಲ್ಲಿ **" ಸುಣ್ಣಘಟ್ಟ ಗ್ರಾಮದ ವಿವಿಧ ಸರ್ವೆ ನಂಬರ್ ಜಮೀನುಗಳಿಗೆ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/98, ದಿನಾಂಕ:21.07.1999ರಂದು ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ, ಆದರೆ ಈ ತಹಲ್‌ವರೆವಿಗೂ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದಾಗ್ಯೂ, ತಾವು ಕೋರಿರುವ** ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ಜಮೀನುಗಳಿಗೆ ಈ ತಹಲ್‌ವರೆವಿಗೂ ಯಾವುದೇ ಭೂಸ್ವಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/238/2021–22, ದಿನಾಂಕ:05.07.2021ರಲ್ಲಿ **"ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ಜಮೀನು ಸರ್ಕಾರದಿಂದ ಹೊರಡಿಸಲಾಗಿರುವ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ:ಸಿಐ 429 ಎಸ್‌ಪಿಕ್ಯೂ 2009, ದಿನಾಂಕ:26.03.2010ರನ್ವಯ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ** " ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 19.80ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ ಹಾಗೂ ಪ್ರಸ್ತಾಪಿತ ಜಮೀನು ಖಾಲಿ ಇದ್ದು ಸುತ್ತಮುತ್ತ ವಸತಿ ಬೆಳವಣಿಗೆಗಳು ಇರುತ್ತವೆ.

ಪ್ರಸ್ತಾವನೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 23.04.2021ರಂದು **"ವಿಜಯವಾಣಿ", "ಉದಯವಾಣಿ" ಮತ್ತು " ಡೆಕ್ಕನ್ ಹೆರಾಲ್ಡ್"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಕೃಷಿ ಉತ್ಪನ್ನಗಳ ಉಗ್ರಾಣ/ ವೇರ್ ಹೌಸ್ ಮತ್ತು ಶೀತಲೀಕರಣ ಕೇಂದ್ರ, ಕಲ್ಯಾಣ ಮಂಟಪ, ಆರೋಗ್ಯ ಕೇಂದ್ರ/ಮೆಡಿಕಲ್ ಕ್ಲಿನಿಕ್, ಶೈಕ್ಷಣಿಕ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ 19.80ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು ಹಾಗೂ ಜಮೀನಿನ ಸುತ್ತಮುತ್ತಲೂ ಅಭಿವೃದ್ಧಿಗಳು ಬಂದಿರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ

ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಕೃಷಿ ಉತ್ಪನ್ನಗಳ ಉಗ್ರಾಣ/ ವೇರ್ ಹೌಸ್ ಮತ್ತು ಶೀತಲೀಕರಣ ಕೇಂದ್ರ, ಕಲ್ಯಾಣ ಮಂಟಪ, ಆರೋಗ್ಯ ಕೇಂದ್ರ/ಮೆಡಿಕಲ್ ಕ್ಲಿನಿಕ್, ಶೈಕ್ಷಣಿಕ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

V ಇತರೆ ವಿಷಯಗಳು

1) **ವಿಶೇಷ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ರಾಮನಗರ ರವರಿಗೆ ಅಭಿಪ್ರಾಯ ನೀಡಿರುವುದರ ಬಗ್ಗೆ ಸ್ಥಿರೀಕರಣಕ್ಕಾಗಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಶಿಡ್ಲಕಲ್ಲು ಗ್ರಾಮದ ಸರ್ವೆ ಸಂಖ್ಯೆ: 49ರ 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ (Service Industries) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಸುಜಾದ್ ಪಾಷ ಇವರು ಸಲ್ಲಿಸಿರುವ ಆನ್‌ಲೈನ್ ಮನವಿಗೆ ಸಂಬಂಧಿಸಿದಂತೆ ನೀಡಿರುವ ಅಭೀಪ್ರಾಯವನ್ನು ಸ್ಥಿರೀಕರಿಸುವ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, Request ID -225203 ರಲ್ಲಿ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಶಿಡ್ಲಕಲ್ಲು ಗ್ರಾಮದ ಸರ್ವೆ ಸಂಖ್ಯೆ: 49ರ 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ (Service Industries) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯೊಂದಿಗೆ 11(ಇ) ನಕ್ಷೆಯನ್ನು ಅಪ್‌ಲೋಡ್ ಮಾಡಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಗೊಂಡ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ವಲಯ ನಿಯಮಾವಳಿಗಳಂತೆ ವ್ಯವಸಾಯ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಕನಿಷ್ಠ 12ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹಾಗೂ ಜಮೀನಿನ ವಿಸ್ತೀರ್ಣ ಕನಿಷ್ಠ 01 ಹೆಕ್ಟೇರ್ ನಿಂದ 02 ಹೆಕ್ಟೇರ್ ವರೆಗೆ ಇದ್ದಲ್ಲಿ ಗರಿಷ್ಠ 100ಚ.ಮೀ ವಿಸ್ತೀರ್ಣ ಉಪಯೋಗಿಸಿಕೊಂಡು Bread and Bakeries, Confectionery, Candles and Sweets, Biscuit Making, Ice, Ice-Cream, Cold Storage (small scale), Areated water and fruit beverages, Huller and Flour Mills, Printing, Book Binding Embossing etc., Laundry, Dry Cleaning and Dyeing facilities, Photography, printing (including sign board printing), Tailoring, Hand Looms, Velvet embroidery shops, Art weavers and silk sarees, printing and binding works, Jewellery , gold ornament and silver wares, Mirror and photo frames, Optical lense grinding, watch, pen repairs, Radio and T.V repairs shops, Electric lamp fittings, Audio/Video liabraries, STD/ISD counters, Electric service industries, computer and software ನಿರ್ಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮುಂದುವರೆದಂತೆ, ಅರ್ಜಿದಾರರಾದ ಶ್ರೀ ಸುಜಾದ್ ಪಾಷ, ಬಿನ್ ಸಾಬಾನ್ ಸಾಬ್ ರವರು ದಿನಾಂಕ: 30.04.2021 (ಸ್ವೀಕೃತ ದಿನಾಂಕ: 03.05.2021) ರಂದು ಮನವಿ ಸಲ್ಲಿಸಿ, ಮನವಿಯೊಂದಿಗೆ ಪ್ರಮಾಣ ಪತ್ರವನ್ನು ಲಗತ್ತಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಅಲಿನೇಷನ್ ನಕ್ಷೆಯಲ್ಲಿ ಇರುವಂತೆ ರೇಷ್ಮೇ ಪಿಲೇಚರ್ ಫ್ಯಾಕ್ಟರಿ ಶೆಡ್ ಇರುವುದಾಗಿ ನಮೂದಿಸಿರುವುದನ್ನು ತಿಳಿಸಿ, ಸದರಿ ಶೆಡ್ ಶಿಥಿಲ ವ್ಯವಸ್ಥೆಯಲ್ಲಿದ್ದು, ಮುಂದಿನ ದಿನಗಳಲ್ಲಿ ಅಂದರೆ, ಭೂ ಪರಿವರ್ತನೆಗೊಂಡ ನಂತರ ವಿನ್ಯಾಸ ಅನುಮೋದನೆ ಪಡೆಯುವ ಮುನ್ನ ತೆರವುಗೊಳಿಸಲಾಗುವುದು ಎಂದು ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಲಾಗಿದೆ.

ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: V(2)ರ ತೀರ್ಮಾನದಲ್ಲಿ" *ಮಹಾಯೋಜನೆಯ ವಲಯನಿಯಮಾವಳಿಗಳಂತೆ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ನಿಗಧಿತ ಅವಧಿಯೊಳಗೆ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯ ನೀಡಬೇಕಾಗಿರುವುದರಿಂದ, ಪ್ರಾಧಿಕಾರದ ಮುಂದಿನ ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯವನ್ನು ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ".*

ಹಾಗಾಗಿ, ಸಭೆಯ ತೀರ್ಮಾನದಂತೆ ಪ್ರಸ್ತಾಪಿತ ಸರ್ವೆ ಸಂಖ್ಯೆ: 49ರ 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ (Service Industries) ಉದ್ದೇಶಕ್ಕಾಗಿ 11ಇ ನಕ್ಷೆಯೊಂದಿಗೆ ಭೂ ಪರಿವರ್ತನೆ ಸಂಬಂಧ ಪ್ರಾಧಿಕಾರದ ಅಭಿಪ್ರಾಯ ಕೋರಿರುವುದರಿಂದ, ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿರುವ 11ಇ ನಕ್ಷೆ ಮತ್ತು ಅರ್ಜಿದಾರರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಆಧರಿಸಿಕೊಂಡು **ಪ್ರಶ್ನಿತ ಜಮೀನಿಗೆ ಕನಿಷ್ಠ 12.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುವುದನ್ನು ಖಚಿತಪಡಿಸಿಕೊಂಡ ನಂತರ** ಕೆಲವು ಷರತ್ತುಗಳಿಗೊಳಪಡಿಸಿ, ಪ್ರಾಧಿಕಾರದ ವಲಯ ನಿಯಮಾವಳಿಗಳಲ್ಲಿ ಅವಕಾಶವಿರುವಂತೆ **ಗರಿಷ್ಠ 100ಚ.ಮೀ ವಿಸ್ತೀರ್ಣ ಉಪಯೋಗಿಸಿಕೊಂಡು ಮೇಲ್ಕಂಡ service industries** ಉದ್ದೇಶಕ್ಕೆ ಭೂ ಪರಿವರ್ತಿಸುವ ಸಂಬಂಧ ಪ್ರಾಧಿಕಾರದಿಂದ ಕಂದಾಯ ಇಲಾಖೆಗೆ ದಿನಾಂಕ: 07.05.2021ರಂದು ಅಭಿಪ್ರಾಯ ನೀಡಲಾಗಿದ್ದು, ಭೂ ಪರಿವರ್ತನೆಗೆ ಅಭಿಪ್ರಾಯ ನೀಡಿರುವ ವಿಷಯವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಶಿಡ್ಲಕಲ್ಲು ಗ್ರಾಮದ ಸರ್ವೆ ಸಂಖ್ಯೆ: 49ರ 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ (Service Industries) ಉದ್ದೇಶಕ್ಕಾಗಿ ಭೂ ಪರಿವರ್ತನೆ ಸಂಬಂಧ ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2)ರ ತೀರ್ಮಾನದನ್ವಯ ಪ್ರಾಧಿಕಾರದಿಂದ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾಗಿರುವ ಅಂಶವನ್ನು ಸಭೆಯಲ್ಲಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

2) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಆಧ್ಯಾದೇಶ 2021 ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2021 ಅನ್ನು ಪ್ರಾಧಿಕಾರದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

*****

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ಅಧಿಸೂಚನೆ ಸಂಖ್ಯೆ:DPAL 26 SHASANA 2021, BENGALURU, ದಿನಾಂಕ:05.07.2021 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರಲ್ಲಿನ ಅವಕಾಶಗಳಿಗೆ ತಿದ್ದುಪಡಿ ಮಾಡಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಆಧ್ಯಾದೇಶ 2021 ಅನ್ನು ಹೊರಡಿಸಿರುತ್ತದೆ. ಸದರಿ ಆಧ್ಯಾದೇಶದಂತೆ ಕಲಂ 17(2)(ಸಿ)ರಲ್ಲಿನ

ಅವಕಾಶಗಳಿಗೆ ತಿದ್ದುಪಡಿ ಮಾಡಿದ್ದು, ಕಲಂ 17(2–D) ಮತ್ತು ಕಲಂ 17(2–E) ಗಳನ್ನು ಹೊಸದಾಗಿ ಪರಿಚಯಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ: UDD 3 TTP 2015, ದಿನಾಂಕ: 25.02.2020ರಲ್ಲಿ ಅಧಿಸೂಚಿಸಲಾಗಿದ್ದ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮ 2019 ರ ನಿಯಮ 37(ಎ) ಮತ್ತು 37(ಸಿ) ಗಳಿಗೆ ಸರ್ಕಾರವು ಅಧಿಸೂಚನೆ ಸಂಖ್ಯೆ: UDD 23 TTP 2020 (E), ದಿನಾಂಕ: 21.06.2021ರಲ್ಲಿ ತಿದ್ದುಪಡಿ ಮಾಡಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2021ಗಳನ್ನು ಹೊರಡಿಸಲಾಗಿರುತ್ತದೆ.

ಈ ಮೇಲ್ಕಂಡ ಅಧಿಸೂಚನೆಗಳಲ್ಲಿನ ಅಂಶಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸುತ್ತಾ, ಮುಂದಿನ ದಿನಗಳಲ್ಲಿ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಆಧ್ಯಾದೇಶ 2021 ಅನ್ನು ಹಾಗೂ ಪ್ರಾಧಿಕಾರದಲ್ಲಿ ಶುಲ್ಕ ಪಾವತಿಸಿಕೊಳ್ಳುವ ಸಂಬಂಧ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2021 ಅನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರವು ಅಧಿಸೂಚನೆ ಸಂಖ್ಯೆ:DPAL 26 SHASANA 2021, BENGALURU, ದಿನಾಂಕ:05.07.2021 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರಲ್ಲಿನ ಅವಕಾಶಗಳಿಗೆ ತಿದ್ದುಪಡಿ ಮಾಡಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಆಧ್ಯಾದೇಶ 2021 ಅನ್ನು ಹಾಗೂ ಸರ್ಕಾರವು ಅಧಿಸೂಚನೆ ಸಂಖ್ಯೆ: UDD 23 TTP 2020 (E), ದಿನಾಂಕ: 21.06.2021ರಲ್ಲಿ ತಿದ್ದುಪಡಿ ಮಾಡಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2021ಗಳನ್ನು ಹೊರಡಿಸಿದ್ದು ಅದರಂತೆ ಪ್ರಾಧಿಕಾರದಲ್ಲಿ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

VI ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು

1) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಹಾಗೂ ಸರ್ವೆ ಸಂಖ್ಯೆ:131/1ರ 01ಎ–18ಗು ಪೈಕಿ 0ಎ–18ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಕೆ.ಆರ್ ದೇವಿ ಸುಲೋಚನಾ ॥ಆ॥ ಕೆ.ಆರ್.ಉಷಾ ರವರ ಪರವಾಗಿ ಜಿಪಿಎ ದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ಮತ್ತು ಶ್ರೀ ಜಿ.ಆರ್.ಭೈರೇಶ್ ಬಿನ್ ರಾಮಪ್ಪ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಸಲ್ಲಿಸಿರುವ ಮನವಿ ಕುರಿತು

*****

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಮತ್ತು ಸರ್ವೆ ಸಂಖ್ಯೆ:131/1ರ 0ಎ–13ಗು ಒಟ್ಟು 10ಎ–02ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಶ್ರೀಮತಿ ಕೆ.ಆರ್ ದೇವಿ

ಸುಲೋಚನಾ ॥ಆ॥ ಕೆ.ಆರ್.ಉಷಾ ರವರ ಪರವಾಗಿ ಜಿಪಿಎ ದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ಮತ್ತು ಶ್ರೀ ಜಿ.ಆರ್.ಭೈರೇಶ್ ಬಿನ್ ರಾಮಪ್ಪ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಮನವಿ ಸಲ್ಲಿಸಿರುತ್ತಾರೆ.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನುಗಳ ಪೈಕಿ ಸರ್ವೆ ಸಂಖ್ಯೆ:131ರಲ್ಲಿ 0ಎ–18ಗು ಭಾಗಶಃ ಪ್ರದೇಶವನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಉಳಿದ ಪ್ರದೇಶವನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ರಸ್ತೆ ಪರಿಚಲನೆ ನಕ್ಷೆಯಂತೆ ಪ್ರಸ್ತಾಪಿತ ಜಮೀನಿನಲ್ಲಿ 18.29ಮೀ (60) ಅಡಿ ರಸ್ತೆಯನ್ನು ಸಹ ಪ್ರಸ್ತಾಪಿಸಲಾಗಿದೆ. ಗ್ರಾಮ ನಕ್ಷೆಯಂತೆ ಪ್ರಸ್ತಾಪಿತ ಜಮೀನಿನಲ್ಲಿ ನಾಲಾ/ಹಳ್ಳ ಹಾದುಹೋಗಿರುವುದನ್ನು ಗಮನಿಸಲಾಗಿದ್ದು, ಜಮೀನಿನಿಂದ ಸುಮಾರು 150 ರಿಂದ 200ಮೀ ಅಂತರದಲ್ಲಿ ವೃಷಭಾವತಿ ನದಿ ಹಾದುಹೋಗಿರುವುದನ್ನು ಸಹ ಗಮನಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್‌ಎಕ್ಯೂ(2)/ಸಿಆರ್:/71/2020–21, ದಿನಾಂಕ:04.02.2021ರಲ್ಲಿ **"ತಾಳಗುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆ ಜಮೀನುಗಳಿಗೆ ಅಧಿಸೂಚನೆ ಸಂಖ್ಯೆ: ಸಿಐ/196/ಎಸ್‌ಪಿಕ್ಯೂ/98, ದಿನಾಂಕ:19.12.1998 ಮತ್ತು ರಾಜ್ಯ ಪತ್ರ ಸಂಖ್ಯೆ: ಸಿಐ/ 196/ಎಸ್‌ಪಿಕ್ಯೂ/98, ದಿನಾಂಕ:29.01.2003ರಲ್ಲಿ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ತದನಂತರ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ಸಿಐ/166/ಎಸ್‌ಪಿಕ್ಯೂ/2006, ದಿನಾಂಕ:14.06.2006 ಹಾಗೂ ರಾಜ್ಯ ಪತ್ರದ ಸಂಖ್ಯೆ: ಸಿಐ/516/ಎಸ್‌ಪಿಕ್ಯೂ/2008, ದಿನಾಂಕ:16.10.2008ರಲ್ಲಿ ಕೆಐಎಡಿ ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ ತಾವು ಕೋರಿರುವ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು, ಸರ್ವೆ ಸಂಖ್ಯೆ:131/1ರ 0ಎ–13ಗು ಒಟ್ಟು 10ಎ–02ಗು ವಿಸ್ತೀರ್ಣದ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/1747/2020–21, ದಿನಾಂಕ:18.02.2021ರಲ್ಲಿ **"ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:128ರ ಪೈಕಿ 06ಎ–10ಗು, ಸರ್ವೆ ಸಂಖ್ಯೆ:131ರ ಪೈಕಿ 04ಎ–20ಗು ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 28(1)ರನ್ವಯ ಪ್ರಾಥಮಿಕ ಅಧಿಸೂಚನೆ ಸಂಖ್ಯೆ:ಸಿಐ 92 ಎಸ್.ಪಿ.ಕ್ಯೂ 96, ದಿನಾಂಕ:15.04.1997ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನನ್ನು ಕೆ.ಐ.ಎ.ಡಿ ಕಾಯ್ದೆ 1966ರ ಕಲಂ 4 ರನ್ವಯ ಅಧಿಸೂಚನೆಯಿಂದ ಕೈಬಿಡುವ ಬಗ್ಗೆ ದಿನಾಂಕ:23.03.1999ರಲ್ಲಿ ಪ್ರಸ್ತಾವನೆಯನ್ನು ವಿಶೇಷ ಜಿಲ್ಲಾಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ರವರಿಗೆ ಕಳುಹಿಸಲಾಗಿದೆ. ತದನಂತರ ಈ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಅಧಿಸೂಚನೆ ಹೊರಡಿಸಿರುವುದು ಕಂಡುಬಂದಿಲ್ಲ. ಉಳಿದಂತೆ ಸರ್ವೆ ಸಂಖ್ಯೆ:126/1ರಲ್ಲಿ 01ಎ–18ಗು, 126/3ರಲ್ಲಿ 0ಎ–20ಗು, 126/4ರಲ್ಲಿ 01ಎ–17ಗು, 126/5ರಲ್ಲಿ 0ಎ–14ಗು ಜಮೀನುಗಳು ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆಯಂತೆ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ"** ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:25.02.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಭೂ ಮಾಪಕರು ಮತ್ತು ತಹಶೀಲ್ದಾರರು, ರಾಮನಗರ ತಾಲ್ಲೂಕು ರವರು ದೃಢೀಕರಿಸಿರುವ ಸರ್ವೆ ನಕ್ಷೆಯನ್ವಯ ಜಮೀನಿನ ದಕ್ಷಿಣದಲ್ಲಿ ಹಂಪಾಪುರದಿಂದ ತಾಳಗುಪ್ಪೆ ಹೋಗುವ 9.0ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಜಮೀನಿಗೆ ಹೊಂದಿಕೊಂಡಂತೆ ತಾಳಗುಪ್ಪೆ ಗ್ರಾಮದ ಬೆಳವಣಿಗೆಗಳು ಹಾಗೂ ಸುಮಾರು 400ಮೀ ಅಂತರದಲ್ಲಿ ತಾಳಗುಪ್ಪೆ ಗ್ರಾಮಠಾಣವು ಇರುತ್ತದೆ ಹಾಗೂ ಸುಮಾರು 250ಮೀ ಅಂತರದಲ್ಲಿ ವೃಷಭಾವತಿ ನದಿ ಇರುತ್ತದೆ. ಈ ಕುರಿತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಮನಗರ ರವರು ಪತ್ರ ಸಂಖ್ಯೆ:ಮಾನಿಮಂ/ಪ್ರಾ.ಕ–ರಾಮನಗರ/2020–21/542, ದಿನಾಂಕ:23.02.2021ರಲ್ಲಿ ವೃಷಭಾವತಿ ನದಿಯ ಸುತ್ತಾಮುತ್ತಲಿನ ವಸತಿ ಉದ್ದೇಶದ ಬೆಳವಣಿಗೆಗಳಿಗೆ ಬಫರ್ ಪ್ರದೇಶವನ್ನು ನಿಗಧಿಪಡಿಸಿರುವುದಿಲ್ಲ ಆದಾಗ್ಯೂ ಅಂದಾಜು 200ಮೀ ಅಂತರದಲ್ಲಿ ವೃಷಭಾವತಿ ನದಿ ಇರುವುದರಿಂದ, ವಸತಿ ಉದ್ದೇಶ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿರುತ್ತದೆ

ಎಂದು ಇನ್ನೂ ಕೆಲವು ಷರತ್ತಿಗೊಳಪಡಿಸಿ, ಪ್ರಾಧಿಕಾರದ ನಿಯಮಾವಳಿಗಳನ್ವಯ ಪರಿಗಣಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1 ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಮತ್ತು ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:131/1ರ 01ಎ–18ಗು ಪೈಕಿ 0ಎ–18ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 69(3)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 09.03.2021ರಂದು "**ಪ್ರಜಾವಾಣಿ**", "**ಈ ಸಂಜೆ**" ಮತ್ತು "**ದಿ ಹಿಂದೂ**" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಸದರಿ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲು ಸೂಚಿಸಿರುವ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸರ್ವೆ ಸಂಖ್ಯೆ:131/1ರ ಪೈಕಿ 0ಎ–18ಗು ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 69(4)ರನ್ವಯ ಭೂ ಉಪಯೋಗ ನಿಗಧಿಪಡಿಸಲು ಮತ್ತು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1 ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯವನ್ನು ಚರ್ಚೆ ಹಾಗೂ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಮತ್ತು ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:131/1ರ 01ಎ–18ಗು ಪೈಕಿ 0ಎ–18ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ ಹಂಪಾಪುರದಿಂದ ತಾಳಗುಪ್ಪೆ ಹೋಗುವ 9.0ಮೀಟರ್ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು ಜಮೀನಿಗೆ ಹೊಂದಿಕೊಂಡಂತೆ ತಾಳಗುಪ್ಪೆ ಗ್ರಾಮಠಾಣದ ಅಭಿವೃದ್ಧಿ ಬೆಳವಣಿಗೆಗಳು ಬಂದಿರುವುದರಿಂದ, ಹಾಗೂ ಸುಮಾರು 250ಮೀ ಅಂತರದಲ್ಲಿ ವೃಷಭಾವತಿ ನದಿ ಇದ್ದು, ಈ ಕುರಿತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಮನಗರ ರವರು 200ಮೀ ಅಂತರದಲ್ಲಿ ವಸತಿ ಉದ್ದೇಶ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿರುತ್ತದೆ ಎಂದು ತಿಳಿಸಿರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ,

ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:131/1ರ 01ಎ–18ಗು ಪೈಕಿ 0ಎ–18ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 69(4)ರನ್ವಯ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1 ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಸಲ್ಲಿಸಿರುವ ಮನವಿ ಕುರಿತು**

*****

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಗ್ರಾಮ ನಕ್ಷೆಯಂತೆ ಪ್ರಸ್ತಾಪಿತ ಜಮೀನಿನ ಉತ್ತರ ದಿಕ್ಕಿನಲ್ಲಿ ನಾಲಾ/ಹಳ್ಳ ಹಾದುಹೋಗಿರುವುದನ್ನು ಗಮನಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿಆರ್:/72/2020–21, ದಿನಾಂಕ:04.02.2021ರಲ್ಲಿ **"ತಾಳಗುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆ ಜಮೀನುಗಳಿಗೆ ಅಧಿಸೂಚನೆ ಸಂಖ್ಯೆ: ಸಿಐ/196/ಎಸ್‌ಪಿಕ್ಯೂ/98, ದಿನಾಂಕ:19.12.1998 ಮತ್ತು ರಾಜ್ಯ ಪತ್ರ ಸಂಖ್ಯೆ: ಸಿಐ/ 196/ಎಸ್‌ಪಿಕ್ಯೂ/98, ದಿನಾಂಕ:29.01.2003ರಲ್ಲಿ ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ತದನಂತರ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ಸಿಐ/166/ಎಸ್‌ಪಿಕ್ಯೂ/2006, ದಿನಾಂಕ:14.06.2006 ಹಾಗೂ ರಾಜ್ಯ ಪತ್ರದ ಸಂಖ್ಯೆ: ಸಿಐ/516/ಎಸ್‌ಪಿಕ್ಯೂ/2008, ದಿನಾಂಕ:16.10.2008ರಲ್ಲಿ ಕೆಐಎಡಿ ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ ತಾವು ಕೋರಿರುವ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರಲ್ಲಿ 04ಎ–39ಗು ವಿಸ್ತೀರ್ಣದ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್ಎಕ್ಯೂ/1746/2020–21, ದಿನಾಂಕ:18.02.2021ರಲ್ಲಿ " **ಕೆಐಎಡಿ ಕಾಯ್ದೆ ಕಲಂ 28(1)ರನ್ವಯ ಪ್ರಾಥಮಿಕ ಅಧಿಸೂಚನೆ ಸಂಖ್ಯೆ:ಸಿಐ 92 ಎಸ್.ಪಿ.ಕ್ಯೂ 96, ದಿಣಾಂಕ:15.04.1997ರಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರಲ್ಲಿ ಒಟ್ಟು 05ಎ–04ಗು ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನನ್ನು ಕೆ.ಐ.ಎ.ಡಿ ಕಾಯ್ದೆ 1966ರ ಕಲಂ 4 ರನ್ವಯ ಪ್ರಾಥಮಿಕ ಅಧಿಸೂಚನೆಯಿಂದ ಕೈಬಿಡುವ ಬಗ್ಗೆ ದಿನಾಂಕ:23.03.1999ರಲ್ಲಿ**

ಪ್ರಸ್ತಾವನೆಯನ್ನು ವಿಶೇಷ ಜಿಲ್ಲಾಧಿಕಾರಿಗಳು, ಕೆಐಎಡಿಬಿ , ಬೆಂಗಳೂರು ರವರಿಗೆ ಕಳುಹಿಸಲಾಗಿದೆ. ತದನಂತರ ಈ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಅಧಿಸೂಚನೆ ಹೊರಡಿಸಿರುವುದು ಕಂಡುಬಂದಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:25.02.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಭೂ ಮಾಪಕರು ಮತ್ತು ತಹಶೀಲ್ದಾರರು, ರಾಮನಗರ ತಾಲ್ಲೂಕು ರವರು ದೃಢೀಕರಿಸಿರುವ ಸರ್ವೆ ನಕ್ಷೆಯನ್ವಯ ಜಮೀನಿನ ದಕ್ಷಿಣದಲ್ಲಿ ಬಿಲ್ಲಕೆಂಪನಹಳ್ಳಿಯಿಂದ ತಾಳಗುಪ್ಪೆ ಊರಿಗೆ ಹೋಗುವ 6.0ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಹಾಗೂ ಗ್ರಾಮ ನಕಾಶೆಯಂತೆ ಪ್ರಶ್ನಿತ ಜಮೀನಿನ ಎದುರುಗಡೆ ಸರ್ವೆ ಸಂಖ್ಯೆ:39ರಲ್ಲಿ ಕೆರೆ/ಕುಂಟೆ ಇರುತ್ತದೆ ಮತ್ತು ಅಕ್ಕಪಕ್ಕದಲ್ಲಿ ವ್ಯವಸಾಯ ಜಮೀನು ಇರುತ್ತದೆ. ಪ್ರಶ್ನಿತ ಜಮೀನಿನಿಂದ ಸುಮಾರು 150ಮೀ ಅಂತರದಲ್ಲಿ ಬಿಡದಿ ಇಂಡಸ್ಟ್ರೀಯಲ್ ಏರಿಯಾ ಮತ್ತು ಸುಮಾರು 500ಮೀ ಅಂತರದಲ್ಲಿ ತಾಳಗುಪ್ಪೆ ಗ್ರಮದ ಬೆಳವಣಿಗೆಗಳು ಇರುತ್ತವೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 09.03.2021ರಂದು **"ವಿಜಯ ಕರ್ನಾಟಕ" ಮತ್ತು "ದಿ ಹಿಂದೂ"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಸದರಿ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲು ಸೂಚಿಸಿರುವ ಹಿನ್ನಲೆಯಲ್ಲಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯವನ್ನು ಚರ್ಚೆ ಹಾಗೂ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ತಹಶೀಲ್ದಾರ್ ರವರು ದೃಢೀಕರಿಸಿರುವ ಸರ್ವೆ ನಕ್ಷೆಯನ್ವಯ ಪ್ರಸ್ತಾಪಿತ ಜಮೀನಿನ ದಕ್ಷಿಣದಲ್ಲಿ ಬಿಲ್ಲಕೆಂಪನಹಳ್ಳಿಯಿಂದ ತಾಳಗುಪ್ಪೆ ಊರಿಗೆ ಹೋಗುವ 6.0ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಪ್ರಸ್ತಾಪಿತ ಜಮೀನಿಗೆ ಸುಮಾರು 150ಮೀ ಅಂತರದಲ್ಲಿ ಬಿಡದಿ ಇಂಡಸ್ಟ್ರೀಯಲ್ ಏರಿಯಾ ಮತ್ತು ಸುಮಾರು 500ಮೀ ಅಂತರದಲ್ಲಿ ತಾಳಗುಪ್ಪೆ ಗ್ರಾಮದ ಬೆಳವಣಿಗೆಗಳು ಬಂದಿರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ

ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 19/3ರ 0ಎ–20ಗು, 19/4ರ 0ಎ–15ಗು, 19/5ರ 0ಎ–17ಗು, 19/6ರ 0ಎ–37ಗು, 19/7ರ 0ಎ–10ಗು, 19/8ರ 0ಎ–10ಗು, 19/9ರ 0ಎ–18ಗು, 19/10ರ 0ಎ–07ಗು, 19/11ರ 0ಎ–30ಗು, 19/12ರ 0ಎ–29ಗು, 19/13ರ 0ಎ–29ಗು, 19/14ರ 05ಎ–13ಗು, 19/15ರ 0ಎ–20ಗು, 19/16ರ 0ಎ–37ಗು, 19/19ರ 02ಎ–04ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, 21/2ರ 0ಎ–19ಗು ಒಟ್ಟು 16ಎ–05ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಎ.ಮುನಿರಾಜಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 19/3ರ 0ಎ–20ಗು, 19/4ರ 0ಎ–15ಗು, 19/5ರ 0ಎ–17ಗು, 19/6ರ 0ಎ–37ಗು, 19/7ರ 0ಎ–10ಗು, 19/8ರ 0ಎ–10ಗು, 19/9ರ 0ಎ–18ಗು, 19/10ರ 0ಎ–07ಗು, 19/11ರ 0ಎ–30ಗು, 19/12ರ 0ಎ–29ಗು, 19/13ರ 0ಎ–29ಗು, 19/14ರ 05ಎ–13ಗು, 19/15ರ 0ಎ–20ಗು, 19/16ರ 0ಎ–37ಗು, 19/19ರ 02ಎ–04ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, 21/2ರ 0ಎ–19ಗು ಒಟ್ಟು 16ಎ–05ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ದಿನಾಂಕ: 01.03.2021 ರಂದು ಮನವಿ ಸಲ್ಲಿಸಲಾಗಿದೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದೆ. ನಂತರ ಸರ್ಕಾರದ ಆದೇಶ ಸಂಖ್ಯೆ:ನಅಇ 230 ಮೈಅಪ್ರಾ 2016, ಬೆಂಗಳೂರು, ದಿನಾಂಕ:27.12.2016ರಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 19/3ರ 0ಎ–20ಗು, 19/4ರ 0ಎ–15ಗು, 19/5ರ 0ಎ–17ಗು, 19/6ರ 0ಎ–37ಗು, 19/7ರ 0ಎ–10ಗು, 19/8ರ 0ಎ–10ಗು, 19/9ರ 0ಎ–18ಗು, 19/10ರ 0ಎ–07ಗು, 19/11ರ 0ಎ–30ಗು, 19/12ರ 0ಎ–29ಗು, 19/13ರ 0ಎ–29ಗು, 19/14ರ 05ಎ–13ಗು, 19/14ರ 02ಎ–04ಗು, 19/15ರ 0ಎ–20ಗು, 19/16ರ 0ಎ–37ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, 21/2ಎರ 0ಎ–19ಗು ಒಟ್ಟು 16ಎ–05ಗು ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಆದೇಶ ಹೊರಡಿಸಲಾಗಿದೆ. ಅದರಂತೆ ಪ್ರಾಧಿಕಾರದಿಂದ ಆದೇಶ ಸಂಖ್ಯೆ:ಬಿಎಂಐಸಿಎಪಿಎ/ನಯೋ–1/84/ಭೂಉಬ/2013–14/1612, ದಿನಾಂಕ:04.03.2017 ರಂತೆ ಭೂ ಉಪಯೋಗ ಬದಲಾವಣೆ ದೃಢೀಕರಣ ಪತ್ರ ನೀಡಲಾಗಿರುತ್ತದೆ.

ಅನುಮೋದಿತ ರಸ್ತೆ ಪರಿಚಲನಾ ನಕ್ಷೆಯಲ್ಲಿ ಸದರಿ ಜಮೀನುಗಳನ್ನು ಬಿಎಂಐಸಿಯ ಟೌನ್‌ಶಿಪ್–2 ಗಾಗಿ ಕಾಯ್ದಿರಿಸಲಾಗಿದೆ. ಈ ಕುರಿತು ಪ್ರಸ್ತಾಪಿತ ಜಮೀನುಗಳ ಭೂ ಉಪಯೋಗ ಬದಲಾವಣೆ ಸಂದರ್ಭದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರು ವಿಷಯದ ಕುರಿತಂತೆ ಲೋಕೋಪಯೋಗಿ ಇಲಾಖೆಯಿಂದ ಮಾಹಿತಿ ಪಡೆದುಕೊಳ್ಳುವಂತೆ ತಿಳಿಸಿರುತ್ತಾರೆ. **ಮೆ॥ ನೀಸೆಲ್ ಸಂಸ್ಥೆಯು** ವಿಷಯದ ಕುರಿತಂತೆ ಯಾವುದೇ **ಮಾಹಿತಿ/ಸ್ಪಷ್ಟೀಕರಣವನ್ನು ಈವರೆವಿಗೂ ನೀಡಿರುವುದಿಲ್ಲ. ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ(ಬಿಎಂಐಸಿಪಿ)ರವರು** ದಿನಾಂಕ:23.07.2015ರ ಪತ್ರದಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಿಗೆ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/ 1998, ದಿನಾಂಕ:21.07.1999ರಲ್ಲಿ ಕೆಐಎಡಿಬಿ ಕಾಯ್ದೆ ಕಲಂ 28(1)ರ ಪ್ರಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ ಎಂದೂ, ಆದರೆ ಈ ತಹಲ್‌ವರೆವಿಗೂ ಅಂತಿಮ ಅಧಿಸೂಚನೆ

ಹೊರಡಿಸಿರುವುದಿಲ್ಲವೆಂದೂ, ಸದರಿ ಬನ್ನಿಕುಪ್ಪೆ ಗ್ರಾಮದ ಸ.ನಂ:19/3, 19/4, 19/5, 19/6, 19/7, 19/8 ಮತ್ತು 19/9, 19/10, 19/11, 19/12, 19/13, 19/14, 19/15, 20/1, 20/2, 20/3, 21/1, 21/2ಎರ ಜಮೀನುಗಳಲ್ಲಿ ಪ್ರಸ್ತಾಪಿಸಿರುವ ಟೌನ್‌ಶಿಪ್–2ನ್ನು ಕೈಬಿಟ್ಟಿರುವ ಬಗ್ಗೆ ಹಾಗೂ ಪ್ರಸ್ತಾಪಿತ ಜಮೀನುಗಳನ್ನು ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆ/ಅಧಿಸೂಚನೆಗಳನ್ನು ಮತ್ತೊಮ್ಮೆ ಪರಿಶೀಲಿಸಲಾಗಿ, ಸದರಿ ಕಛೇರಿಯಿಂದ ಭೂಸ್ವಾಧೀನದ ಉದ್ದೇಶವನ್ನು ಒಳಗೊಂಡಂತೆ ಟೌನ್‌ಶಿಪ್, ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ, ಎಂಬುದಾಗಿ ಪ್ರತ್ಯೇಕ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲವೆಂದೂ, **ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ/ 196/ ಎಸ್‌ಪಿ ಕ್ಯೂ/1998, ದಿನಾಂಕ:21.07.1999ರಂತೆ ಕೆಐಎಡಿಬಿ ಕಾಯ್ದೆ ಕಲಂ 28(1)ರ ಪ್ರಕಾರ ಸ.ನಂ:19ರಲ್ಲಿ 29ಎ–18ಗು ಸ.ನಂ:20ರಲ್ಲಿ 01ಎ–06ಗು ಹಾಗೂ ಸ.ನಂ:21ರಲ್ಲಿ 0ಎ–23ಗುಂಟೆ ಜಮೀನಿಗೆ ಭೂಸ್ವಾಧೀನಪಡಿಸಿರುತ್ತೆ ಹಾಗೂ ತದನಂತರ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/1998, ದಿನಾಂಕ:11.02.2004ರಂತೆ ಭೂಸ್ವಾಧೀನದಿಂದ ಹಿಂತೆಗೆದುಕೊಳ್ಳಲಾಗಿದೆ** ಎಂದು ತಿಳಿಸಿರುತ್ತಾರೆ. ಯೋಜನಾ ಸಮನ್ವಯಾಧಿಕಾರಿಗಳು (ಬಿಎಂಐಸಿಪಿ) ಲೋಕೋಪಯೋಗಿ ಇಲಾಖೆರವರು ದಿನಾಂಕ:28.07.2015ರ ಪತ್ರದೊಂದಿಗೆ ದಿನಾಂಕ:03.06.1997ರ ಅ.ಸ.ಪತ್ರ ಹಾಗೂ ಅದರ ಅಡಕ (ಬಿಎಂಐಸಿ ಯೋಜನೆಗೆ ಅವಶ್ಯಕವಿರುವ ಜಮೀನುಗಳ ಪಟ್ಟಿಯನ್ನು) ಲಗತ್ತಿಸಿ ಸದರಿ ಪಟ್ಟಿಯಲ್ಲಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:8, 11 ಮತ್ತು 19 ಸೇರಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಸದರಿ ಅಡಕದಲ್ಲಿ **ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:8, 11 ಮತ್ತು 19ಸೇರಿದ್ದು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:8, 11 ಮತ್ತು 19 ಸೇರಿರುವುದಿಲ್ಲ.** ಆದ್ದರಿಂದ, ಈ ಬಗ್ಗೆ ಹಾಗೂ ಪ್ರಶ್ನಿತ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡುವುದರ ಕುರಿತು ಸಭೆಯಲ್ಲಿ ಯೋಜನಾ ಸಮನ್ವಯಾಧಿಕಾರಿಗಳು (ಬಿಎಂಐಸಿಪಿ), ಲೋಕೋಪಯೋಗಿ ಇಲಾಖೆ ರವರು ಪತ್ರ ಸಂಖ್ಯೆ:ಲೋಇ 155 ಸಿಆರ್‌ಎಂ 96ರಲ್ಲಿ ಸೇರಿರುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿ–1, ಕೆಐಎಡಿಬಿರವರು ದಿನಾಂಕ:12.11.2013ರ ಪತ್ರದಲ್ಲಿ ಬನ್ನಿಕುಪ್ಪೆ ಗ್ರಾಮದ ಸ.ನಂ:19/3ರಿಂದ 19/16, 20/1 ರಿಂದ 20/3, 21/1, 21/2ಎ ಜಮೀನುಗಳು ಸಂಖ್ಯೆ:ಸಿಐ 104 ಎಸ್‌ಪಿಕ್ಯೂ 2003, ದಿನಾಂಕ:17.03.2007ರ ಅಧಿಸೂಚನೆಯಲ್ಲಿ ಸೇರಿರುವುದಿಲ್ಲವೆಂದೂ ಮಂಡಳಿಗೆ ಅವಶ್ಯಕತೆ ಇದ್ದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ಕಾಯ್ದಿರಿಸಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಪ್ರಸ್ತಾಪಿಸಿರುವ ಅಧಿಸೂಚನೆ ಹೊರತುಪಡಿಸಿ ಪ್ರಶ್ನಿತ ಜಮೀನಿಗೆ ಇನ್ನಿತರೆ ಅಧಿಸೂಚನೆ ಹೊರಡಿಸಲಾಗಿದೆಯೇ ಎಂಬುದರ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಎಐಎಡಿಬಿ ರವರು ಪತ್ರ ಸಂಖ್ಯೆ:ಕೆಐಎಡಿಬಿ/ಎಲ್‌ಎಕ್ಯೂ/298/2013–14/1496, ದಿನಾಂಕ:06.11.2015ರಲ್ಲಿ ಸದರಿ ಜಮೀನುಗಳು ಈವರೆವಿಗೂ ಹೊರಡಿಸಲಾಗಿರುವ ಭೂಸ್ವಾಧೀನದ ಅಧಿಸೂಚನೆ ಹೊರತುಪಡಿಸಿ ಬೇರಾವ ಅಧಿಸೂಚನೆಗಳನ್ನು ಹೊರಡಿಸಿರುವುದಿಲ್ಲವೆಂದೂ ಸ್ಪಷ್ಟ ಮಾಹಿತಿಯನ್ನು ನೀಡಿರುತ್ತಾರೆ.

ಪ್ರಸ್ತಾಪಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಸಂಖ್ಯೆ:LAND10019856, ದಿನಾಂಕ:13.08.2019ರಲ್ಲಿ 19/5ರ 0ಎ–17ಗು, 19/9ರ 0ಎ–18ಗು, 19/7ರ 0ಎ–10ಗು, 19/8ರ 0ಎ–10ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, ಸಂಖ್ಯೆ:LAND10019855, ದಿನಾಂಕ:03.08.2019ರಲ್ಲಿ ಸರ್ವೆ ಸಂಖ್ಯೆ: 19/19ರ 02ಎ–04ಗು, ಅರ್ಜಿ ಸಂಖ್ಯೆ:16636, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/3ರ 0ಎ–20ಗು, ಅರ್ಜಿ ಸಂಖ್ಯೆ:16653, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/12ರ 0ಎ–29ಗು, ಅರ್ಜಿ ಸಂಖ್ಯೆ:14660, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/6ರ 0ಎ–37ಗು, ಅರ್ಜಿ ಸಂಖ್ಯೆ:14664, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:21/2ಎರ 0ಎ–19ಗು, ಅರ್ಜಿ ಸಂಖ್ಯೆ:14667, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/4ರ 0ಎ–15ಗು, ಅರ್ಜಿ ಸಂಖ್ಯೆ:16633, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/13ರ 0ಎ–29ಗು, ಅರ್ಜಿ ಸಂಖ್ಯೆ:16635, ದಿನಾಂಕ:17.09.2019ರಲ್ಲಿ ಸರ್ವೆ ಸಂಖ್ಯೆ:19/11ರ 0ಎ–30ಗು, ಅರ್ಜಿ ಸಂಖ್ಯೆ:14666, ದಿನಾಂಕ:16.09.2019ರಲ್ಲಿ ಸರ್ವೆ ಸಂಖ್ಯೆ:19/15ರ 0ಎ–20ಗು, ಅರ್ಜಿ ಸಂಖ್ಯೆ:6671, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:19/16ರ

0ಎ–37ಗು, ಅರ್ಜಿ ಸಂಖ್ಯೆ:140753, ದಿನಾಂಕ:13.02.2020ರಲ್ಲಿ ಸರ್ವೆ ಸಂಖ್ಯೆ:19/10ರ 0ಎ–07ಗು, ಅರ್ಜಿ ಸಂಖ್ಯೆ:140975, ದಿನಾಂಕ:13.02.2020ರಲ್ಲಿ ಸರ್ವೆ ಸಂಖ್ಯೆ:19/14ರ 05ಎ–13ಗು ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ.

ಪ್ರಸ್ತಾಪಿತ ಜಮೀನನ್ನು ದಿನಾಂಕ: 05.07.2021ರಂದು ಪ್ರಾಧಿಕಾರದಿಂದ ಸ್ಥಳ ಪರಿಶೀಲನೆ ಮಾಡಲಾಗಿ, ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಇರುವುದು ಕಂಡುಬರುತ್ತದೆ. ಸದರಿ ರಸ್ತೆಯು ಅವರಗೆರೆ ಯಿಂದ ದೊಡ್ಡೇರಿಗೆ ಹೋಗುವ ರಸ್ತೆಯನ್ನು ಸಂಪರ್ಕಿಸುತ್ತದೆ. ಪ್ರಸ್ತಾಪಿತ ಜಮೀನಿನ ಸರ್ವೆ ನಂಬರ್‌ಗಳ ಪೈಕಿ ಸರ್ವೆ ಸಂಖ್ಯೆ: 19,20,21 ಜಮೀನುಗಳ ಪಶ್ಚಿಮದ ಎಲ್ಲೆಗೆ ಹೊಂದಿಕೊಂಡಂತೆ ಉತ್ತರ ದಕ್ಷಿಣವಾಗಿ ಪ್ರೈಮರಿ ಹಳ್ಳವು ಹಾದುಹೋಗಿರುತ್ತದೆ ಮತ್ತು ಪ್ರಶ್ನಿತ ಜಮೀನಿನ ಪಶ್ಚಿಮದ ಕಡೆಯ ನೈರುತ್ಯ ಮೂಲೆಗೆ ದಕ್ಷಿಣದಿಂದ ಪಶ್ಚಿಮವಾಗಿ ಹೆಚ್.ಟಿ. ಲೈನ್ ಹಾದುಹೋಗಿರುತ್ತದೆ ಹಾಗೂ ಗ್ರಾಮ ನಕ್ಷೆಯಂತೆ ಸರ್ವೆ ಸಂಖ್ಯೆ: 19ರಲ್ಲಿ ಪೂರ್ವ ಪಶ್ಚಿಮವಾಗಿ ಹಳ್ಳ ಹಾದುಹೋಗಿರುತ್ತದೆ.

ಅರ್ಜಿದಾರರು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಮೂಲಭೂತ ಸೌಕರ್ಯ ನಿರ್ವಹಣೆ ಮಾಡುವ ಬಗ್ಗೆ, ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಹಾಗೂ Consent for Establishment ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಸೂಚಿಸಿರುತ್ತಾರೆ. ಅದರಂತೆ, ಪ್ರಸ್ತಾಪಿತ ಜಮೀನಿಗೆ ನಿಯಮಾನುಸಾರ ವಿನ್ಯಾಸ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶದಂತೆ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲಾಗಿದ್ದು ಹಾಗೂ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ಪ್ರಸ್ತಾಪಿತ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುವುದರಿಂದ, ಪ್ರಶ್ನಿತ ಜಮೀನಿಗೆ ಇರುವ ಸಂಪರ್ಕ ರಸ್ತೆಯನ್ನು ಪರಿಶೀಲಿಸಿಕೊಂಡು ಹಾಗೂ ಸದರಿ ಜಮೀನಿನಲ್ಲಿ ಹಾದುಹೋಗಿರುವ ಹೆಚ್.ಟಿ.ಲೈನ್ ಅನ್ನು ಅಳವಡಿಸಿಕೊಂಡು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 19/3ರ 0ಎ–20ಗು, 19/4ರ 0ಎ–15ಗು, 19/5ರ 0ಎ–17ಗು, 19/6ರ 0ಎ–37ಗು, 19/7ರ 0ಎ–10ಗು, 19/8ರ 0ಎ–10ಗು, 19/9ರ 0ಎ–18ಗು, 19/10ರ 0ಎ–07ಗು, 19/11ರ 0ಎ–30ಗು, 19/12ರ 0ಎ–29ಗು, 19/13ರ 0ಎ–29ಗು, 19/14ರ 05ಎ–13ಗು, 19/15ರ 0ಎ–20ಗು, 19/16ರ 0ಎ–37ಗು, 19/19ರ 02ಎ–04ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, 21/2ರ 0ಎ–19ಗು ಒಟ್ಟು 16ಎ–05ಗು ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ನಿಯಮಾನುಸಾರ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಇದ್ದಲ್ಲಿ ವಲಯ ನಿಯಮಾವಳಿಗಳ ಮಿತಿಯಲ್ಲಿ ಪರಿಶೀಲಿಸಿಕೊಂಡು ಅನುಮೋದಿಸಲು ಸದಸ್ಯ–ಕಾರ್ಯದರ್ಶಿ ರವರಿಗೆ ಅಧಿಕಾರ ನೀಡಲಾಯಿತು.

4) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:16ರ 04ಎ–20ಗು, 17/2ರ 02ಎ–17ಗು, 86/1ಎರ 0ಎ–16ಗು, 86/1ಬಿರ 02ಎ–24ಗು, 86/2ರ 02ಎ–31ಗು, 87/1ರ 04ಎ–21ಗು ಮತ್ತು ಸರ್ವೆ ಸಂಖ್ಯೆ:87/2ರ 0ಎ–31ಗು ಒಟ್ಟು 18ಎಕರೆ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಎಸ್.ಎಲ್.ವಿ ಕಾರ್ಪ್ ರವರ ಪಾಲುದಾರರಾದ ಶ್ರೀ ಆರ್.ಕಿಶೋರ್ ಕುಮಾರ್ ಮತ್ತು ಶ್ರೀಮತಿ ಲಕ್ಷ್ಮಿ ಕೃಷ್ಣಮಣಿ ಇವರುಗಳು ಸಲ್ಲಿಸಿರುವ ಮನವಿ ಕುರಿತು**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳಲ್ಲಿನ ಒಟ್ಟು 18ಎಕರೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿದ್ದ ಹಿನ್ನಲೆಯಲ್ಲಿ, ಪ್ರಸ್ತಾವನೆಯನ್ನು ದಿನಾಂಕ:07.09.2020ರಂದು ಜರುಗಿದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:IX(2) ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ, ಪ್ರಸ್ತಾಪಿತ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

ನಂತರ, ತಹಶೀಲ್ದಾರ್, ರಾಮನಗರ ತಾಲ್ಲೂಕು ರವರು ದಿನಾಂಕ:01.03.2021ರ ಪತ್ರದಲ್ಲಿ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸುವ ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:20ರ ಸರ್ಕಾರಿ ಖರಾಬು ಕಟ್ಟೆಯಲ್ಲಿರುವ ರೂಢಿ ದಾರಿಯನ್ನು ಪರಿಗಣಿಸಿ ಬಡಾವಣೆಗೆ ಯಾವುದೇ ಆದೇಶ/ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

ತದನಂತರ ಅರ್ಜಿದಾರರು ದಿನಾಂಕ:07.05.2021ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಮನವಿಯೊಂದಿಗೆ ಸಾರ್ವಜನಿಕ ರಸ್ತೆ ಸಂಪರ್ಕದ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ:19ರಲ್ಲಿ 482.02ಚ.ಮೀ ಮತ್ತು ಸರ್ವೆ ಸಂಖ್ಯೆ:17/1ರಲ್ಲಿ 219.91 ಚ.ಮೀ ವಿಸ್ತೀರ್ಣವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ, ಬಿಡದಿ ಹೋಬಳಿ, ರಾಮನಗರ ರವರಿಗೆ ಪರಿತ್ಯಜನಾ ಮಾಡಿಕೊಟ್ಟಿರುವ ಬಗ್ಗೆ ಪರಿತ್ಯಜನಾ ಪತ್ರದ ಪ್ರತಿಯನ್ನು ಲಗತ್ತಿಸುತ್ತಾ, ಸದರಿ ರಸ್ತೆ ಪ್ರದೇಶದಿಂದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಒದಗುತ್ತಿರುವುದರಿಂದ, ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರು ಮತ್ತು ಮಾನ್ಯ ಅಧ್ಯಕ್ಷರು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರು ಪತ್ರ ಸಂಖ್ಯೆ:33/6/2021, ದಿನಾಂಕ:03.06.2021ರ ನಿರಾಕ್ಷೇಪಣಾ ಪತ್ರದಲ್ಲಿ ಪರಿತ್ಯಜನಾ ಪತ್ರ ಮಾಡಿಕೊಟ್ಟಿರುವ ಬಗ್ಗೆ ಹಾಗೂ ಪ್ರಸ್ತಾಪಿತ ಜಮೀನಿಗೆ 10.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುವುದಾಗಿ ದೃಢೀಕರಿಸುತ್ತಾ, ಸದರಿ ವಿನ್ಯಾಸಕ್ಕೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿಯ ಒಪ್ಪಿಗೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು ರವರು ಪತ್ರ ಸಂಖ್ಯೆ:ಭೂಸನಿ/ವಿನ್ಯಾಸ ನಕ್ಷೆ/38/2020–21, ದಿನಾಂಕ:05.07.2021ರ ಪತ್ರದೊಂದಿಗೆ ಪ್ರಸ್ತಾಪಿತ ಜಮೀನಿಗೆ ಸಾರ್ವಜನಿಕ ರಸ್ತೆ ಸಂಪರ್ಕ ಇರುವುದಾಗಿ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಲಗತ್ತಿಸುತ್ತಾ, ಪ್ರಸ್ತಾಪಿತ ಜಮೀನಿನಲ್ಲಿ ಈಗಾಗಲೇ ಇದ್ದ ಎಲ್.ಟಿ.ಲೈನ್ ಅನ್ನು ನಿಗಧಿತ ಶುಲ್ಕ ಪಾವತಿಸಿಕೊಂಡು ಸ್ಥಳಾಂತರಿಸಿರುವುದು ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಸರ್ವೆ ಸಂಖ್ಯೆ:17/1 ಮತ್ತು ಸರ್ವೆ ಸಂಖ್ಯೆ:19ರಲ್ಲಿ ಸಾರ್ವಜನಿಕ ರಸ್ತೆಗಾಗಿ ಪರಿತ್ಯಜನಾ ಮಾಡಿಕೊಟ್ಟಿರುವ ರಸ್ತೆ ಪ್ರದೇಶವನ್ನು ಪರಿಗಣಿಸಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:16ರ 04ಎ–20ಗು, 17/2ರ 02ಎ–17ಗು, 86/1ಎರ 0ಎ–16ಗು, 86/1ಬಿರ 02ಎ–24ಗು, 86/2ರ 02ಎ–31ಗು, 87/1ರ 04ಎ–21ಗು ಮತ್ತು ಸರ್ವೆ ಸಂಖ್ಯೆ:87/2ರ 0ಎ–31ಗು ಒಟ್ಟು 18ಎಕರೆ

ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶಕ್ಕಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರಿಗೆ ಕೈಗಾರಿಕೆಗೆ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಸರ್ವೆ ಸಂಖ್ಯೆ:19ರಲ್ಲಿ ಮತ್ತು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಸರ್ವೆ ಸಂಖ್ಯೆ:17/1ರಲ್ಲಿ ಪರಿತ್ಯಜನಾ ಮಾಡಿಕೊಟ್ಟಿರುವುದನ್ನು ಸಭೆಯು ಗಮನಿಸಿತು. ಸರ್ವೆ ಸಂಖ್ಯೆ:19 ಮತ್ತು 17/1ರಲ್ಲಿ ಪರಿತ್ಯಜನಾ ಮಾಡಿಕೊಟ್ಟಿರುವ 10.0ಮೀ ಅಗಲದ ರಸ್ತೆಯಿಂದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಒದಗುವುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರು ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು ರವರುಗಳು ದೃಢೀಕರಿಸಿರುವುದರಿಂದ, ಸದರಿ ರಸ್ತೆ ಪ್ರದೇಶವನ್ನು ಪರಿಗಣಿಸಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:16ರ 04ಎ–20ಗು, 17/2ರ 02ಎ–17ಗು, 86/1ಎರ 0ಎ–16ಗು, 86/1ಬಿರ 02ಎ–24ಗು, 86/2ರ 02ಎ–31ಗು, 87/1ರ 04ಎ–21ಗು ಮತ್ತು ಸರ್ವೆ ಸಂಖ್ಯೆ:87/2ರ 0ಎ–31ಗು ಒಟ್ಟು 18ಎಕರೆ ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಇದ್ದಲ್ಲಿ ವಲಯ ನಿಯಮಾವಳಿಗಳ ಮಿತಿಯಲ್ಲಿ ಪರಿಶೀಲಿಸಿಕೊಂಡು ಅನುಮೋದಿಸಲು ಸದಸ್ಯ–ಕಾರ್ಯದರ್ಶಿ ರವರಿಗೆ ಅಧಿಕಾರ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

13/7/2021

ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

13/7/21

ಅಧ್ಯಕ್ಷರು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು